
# ನಾದನೂಪುರ ವಂಡಾರು
# Nadanoopura Vandaru

ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nada noopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email: nadanoopuravandaru@gmail.com
Website – https://nyt.1ngo.in/




ಪರಿವಿಡಿ
ಬೋರ್ಡ್ ರೂಮ್
ಸಂಪಾದಕೀಯ
ಉಡುಪಿಯ ಕಲೆಗೆ ರಾಜ ವೇದಿಕೆ–ಐವೈಸಿ
ನೆನಪು – ಸುಮಧುರ ಕಂಠದ ಸುಬ್ರಹ್ಮಣ್ಯ ಧಾರೇಶ್ವರ
ಬಡಗುತಿಟ್ಟು ಭಾಗವತಿಕೆಯ ಶೈಲಿ–ಮಟ್ಟುಗಳ ಪ್ರಾತ್ಯಕ್ಷಿಕೆ
ಧೀರ ಕಲೆಯೊಳಗೆ ಕೀರವಾಣಿಯರು–23 ಶ್ರೀಮತಿ ಪದ್ಮಾ ಕೆ. ಆರ್ ಆಚಾರ್ಯ
ಯಕ್ಷ ಕೃತಿ ಪರಿಚಯ ಮಾಲಿಕೆ–04

## ತಿಂಗಳ ಹೈಲೈಟ್ಸ್

**ವಿಷಾದದ ವಿದಾಯ – ಹೋಗಿ ಬನ್ನಿ ಧಾರೇಶ್ವರ ಭಾಗವತರೆ**

**ಯಕ್ಷಗಾನದ ಹುಟ್ಟು ಸ್ವರೂಪ ಇನ್ನೂ ನಿಗೂಢ**

**ಉಡುಪಿಯ ಕಲೆಗೆ ರಾಜ ವೇದಿಕೆ: ಕಲಾಚಟುವಟಿಕೆಗಳಿಗೆ ಸುಸಜ್ಜಿತ ಸಂಶೋಧನಾ ಕೇಂದ್ರ – ಐವೈಸಿ**

**ಪ್ರಾತ್ಯಕ್ಷಿಕೆಯಲ್ಲಿ ದಾಖಲಾದ ಬಡಗುತಿಟ್ಟು ಭಾಗವತಿಕೆಯ ಶೈಲಿ–ಮಟ್ಟುಗಳು**

## ಬೋರ್ಡ್ ರೂಂ

**ಆತ್ಮೀಯರೆ,**

ಕಲಾವಿದರ ಬದುಕು ಇಷ್ಟೆ. ಸಾಯೋವರೆಗೂ ಕಲೆಯನ್ನು ಪ್ರೀತಿಸುವುದು, ಜೀವನಪೂರ್ತಿ ಅಭಿಮಾನಿಗಳನ್ನು ರಂಜಿಸುವುದು, ಜನಮಾನಸದಲ್ಲಿ ಅಭಿಮಾನ ಪಡದುಕೊಳ್ಳುವುದು, ಒಳ್ಳೆಯ ಅನುಭವವೇ ಆಗಲಿ, ಕೆಟ್ಟ ಅನುಭವವೇ ಆಗಲಿ ಬಂದದ್ದನ್ನು ಬಂದಂತೆ ಸ್ವೀಕರಿಸಿ ಕಲೆಯನ್ನೇ ಬದುಕಾಗಿಸಿ, ಕಲೆಗಾಗಿಯೇ ಬದುಕಿ ಸಾರ್ಥಕತೆ ಕಂಡುಕೊಳ್ಳುವುದು. ಸಾಯುವ ಕಾಲಕ್ಕೆ ಕಲಾವಿದ ಸಂಪಾದಿಸುವ ಅತೀ ದೊಡ್ಡ ಆಸ್ತಿ ಅಂದರೆ ಅಭಿಮಾನಿಗಳ ಪ್ರೀತಿ. ಅನೇಕ ಕಲಾವಿದರು ಹೀಗೆ ಸದ್ದಿಲ್ಲದೆ ಇಹಲೋಕದ ವ್ಯವಹಾರವನ್ನು ಮುಗಿಸಿ ಹೊರಟೇ ಬಿಡುತ್ತಾರೆ. ಆಗಷ್ಟೇ ಅವರ ಸಂಪಾದನೆಯ ಲೆಕ್ಕಾಚಾರ ಗೋಚರವಾಗುತ್ತದೆ. ಸುಬ್ರಹ್ಮಣ್ಯ ಧಾರೇಶ್ವರರು ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಸಂಪಾದಿಸಿಕೊಂಡಿದ್ದ ದಿಗ್ಗಜ ಕಲಾವಿದರು. ಕಲಾವಿದರಲ್ಲಿ ಅನೇಕ ರೀತಿಯ ಕಲಾವಿದರಿದ್ದಾರೆ. ಕಲೆಯಲ್ಲಿ ಆದಷ್ಟು ಲಾಭ ಬಯಸುವವರು, ಕಲೆಯಿಂದ ಬೇಕಾದಷ್ಟು ಪಡೆದುಕೊಂಡೂ ಯಾವತ್ತೂ ತೃಪ್ತಿ ಇಲ್ಲದವರು, ಸಿಕ್ಕ ಕೀರ್ತಿ ಸಂಪಾದನೆಯಲ್ಲೇ ತೃಪ್ತರಾಗುವವರು. ಆದರೆ ದಿ. ಧಾರೇಶ್ವರರು ಸಿಕ್ಕಿರುವ ಮನ್ನಣೆ, ಪ್ರಚಾರಗಳಿಗೆ ಬೀಗಿದವರೂ ಅಲ್ಲ, ನಿಂದನೆಗಳೆದುರಾದಾಗ ಕುಗ್ಗಿದವರೂ ಅಲ್ಲ. ಹೆಚ್ಚು ಅಪೇಕ್ಷೆ ಇಲ್ಲದ, ನಿಸ್ವಾರ್ಥ, ಸರಳ ಜೀವಿ. ಮತ್ತೊಬ್ಬರಿಗೆ ಆದರ್ಶ ಇವರ ಜೀವನ. ಒಂದು ಕಾಲಘಟ್ಟದಲ್ಲಿ ಪ್ರತಿ ದಿನ, ಪ್ರತಿ ಪ್ರದರ್ಶನಕ್ಕೂ ಅನಿವಾರ್ಯ ಎನಿಸಿಕೊಂಡಿದ್ದ ರಂಗ ನಿರ್ದೇಶಕರಿವರು. ತಿರುಗಾಟದಲ್ಲಿ ಇವರಿದ್ದ ಮೇಳ ಸೋಲು ಕಾಣದಂತೆ ಪ್ರಸಂಗ ನಿರ್ವಹಿಸಿದ ಕೀರ್ತಿಯೂ ಇವರದು. ಆದರೆ ಯಾವ ಸಂದರ್ಭದಲ್ಲೂ ತನ್ನಿಂದಲೇ ಎಲ್ಲವೂ ಎಂಬಂತೆ ನಡೆದುಕೊಂಡದ್ದಿಲ್ಲ. ಕೀರ್ತಿಶೇಷರು ಯಕ್ಷಪ್ರೇಮಿಗಳ ಮಿಡಿತವನ್ನು ಅರ್ಥೈಸಿಕೊಂಡು ಅದಕ್ಕೆ ತಕ್ಕಂತೆ ಬದಲಾವಣೆ, ಹೊಸತನ ಹಾಗೂ ಸಂಪ್ರದಾಯವನ್ನೂ ಬಿಡದೆ ರಂಗವನ್ನು ನಡೆಸಿದವರು ನಿರ್ದೇಶಿಸಿದವರು. ಅವರ ರಂಗ ತಾಂತ್ರಿಕತೆಯಲ್ಲಿ ಯಶಸ್ಸು ಕಂಡ ಸರಣಿ ಪ್ರಸಂಗಗಳಿವೆ. ಮನಸಲ್ಲಿ ಅಚ್ಚೊತ್ತಿ ಕುಳಿತ ಸಾವಿರಾರು ಯಕ್ಷಗಾನದ ಪದಗಳಿವೆ. ಅನೇಕ ಕಲಾವಿದರಲ್ಲಿ ಅವರು ಹೇಳಿಕೊಟ್ಟ ಪಾಠಗಳಿವೆ. ಕೆಲವು ದಶಕಗಳ ಹಿಂದೆ ಸಾಲಿಗ್ರಾಮ ಮೇಳದಲ್ಲಿ ದಿ. ಕಾಳಿಂಗ ನಾವುಡರು ಪ್ರಧಾನರಾದ್ದರೆ ಪೆರ್ಡೂರು ಮೇಳಕ್ಕೆ ಸುಬ್ರಹ್ಮಣ್ಯ ಧಾರೇಶ್ವರರು ಪ್ರಧಾನರಾಗಿದ್ದರು. ಆ ಕಾಲದಲ್ಲಿ ಇವರಿಬ್ಬರ ನಡುವೆ ಪೈಪೋಟಿ ಇತ್ತು ಎಂಬುದನ್ನು ಕೇಳಿದ ನೆನಪು. ಆದರೆ ರಂಗ ಪ್ರಯೋಗದಲ್ಲಿ ಹೊಸತನದ ವಿಚಾರ, ಸಾಂಪ್ರದಾಯಿಕತೆಯನ್ನು ಉಳಿಸಿಕೊಳ್ಳುವಲ್ಲಿ ಕಲಾವಿದರಾಗಿ ಬದ್ಧತೆ ಈ ವಿಚಾರಗಳಲ್ಲಿ ನಾವುಡರು ಹಾಗೂ ಧಾರೇಶ್ವರರ ಮನೋಸ್ಥಿತಿಯಲ್ಲಿ ಸಾಮ್ಯತೆ ಇತ್ತು ಎಂಬುದನ್ನು ಹಿರಿಯ ಕಲಾವಿದರು ಹೇಳಿಕೊಳ್ಳುವುದಿದೆ. ಸುಬ್ರಹ್ಮಣ್ಯ ಧಾರೇಶ್ವರರ ನಿರ್ದೇಶನಕ್ಕೊಳಪಟ್ಟ ಕಲಾವಿದರು ಅವರ ಬಗ್ಗೆ ಅಪಾರವಾದ ಗೌರವವನ್ನು ಹೊಂದಿದ್ದಾರೆ ಅಲ್ಲದೆ ಅವರಿಂದ ಬಹಳ ಕಲಿತವರೇ ಹೆಚ್ಚು. ಅಂತಹ ಕಲಾವಿದರಲ್ಲಿ ನಾನೂ ಒಬ್ಬ. ಅವರೊಂದಿಗೆ ನನ್ನ ಅನುಭವದ ಬಗ್ಗೆ ಹೇಳುವುದಾದರೆ ದಿ. ಧಾರೇಶ್ವರರು ಒಬ್ಬ ನಿಜವಾದ ರಂಗನಿರ್ದೇಶಕ ಎಂಬುದಕ್ಕೆ ಅನ್ವರ್ಥಕವಾಗಿದ್ದರು. ರಂಗಸ್ಥಳದಲ್ಲಿ ಪ್ರಯೋಗಶೀಲತೆಯ ಬಗ್ಗೆ ಆಸಕ್ತರಾಗಿದ್ದರು. ಅದಕ್ಕೆ ಅವರಿಂದ ನಿರ್ದೇಶಿಲ್ಪಟ್ಟ ಪ್ರಸಂಗಗಳೇ ಸಾಕ್ಷಿ. ಆದರೆ ಪೌರಾಣಿಕ ಪ್ರಸಂಗಗಳಲ್ಲಿ ಸಾಂಪ್ರದಾಯಿಕ ಶೈಲಿಗೇ ಹೆಚ್ಚು ಒತ್ತು ನೀಡುತ್ತಿದ್ದರು. ನನಗೆ ಮೇಳದ ತಿರುಗಾಟದಲ್ಲಿ ಅವರ ನಂಟು ಇಲ್ಲವಾದರೂ ಮಳೆಗಾಲದ ಆಟಗಳಲ್ಲಿ ಅವರ ಭಾಗವತಿಕೆಗೆ ರಂಗಸ್ಥಳದಲ್ಲಿ ವೇಷ ಮಾಡಿದ್ದೇನೆ. ಧಾರೇಶ್ವರರು ಭಾಗವತಿಕೆಯಲ್ಲಿದ್ದಾರೆ ಎಂದರೆ ಯಾವುದೇ ಕಲಾವಿದ ಭಯ ಗೌರವ–



ಗೋವಿಂದ ವಂಡಾರು

ದಿಂದಲೇ ಪಾತ್ರಕ್ಕೆ ಸಿದ್ಧರಾಗುತ್ತಾರೆ. ಅದಕ್ಕೆ ಕಾರಣ ಪ್ರತೀ ವೇಷಧಾರಿಯ ಪ್ರಸ್ತುತಿಯನ್ನು ಅವರು ಅವಲೋಕನ ಮಾಡುವ ರೀತಿ. ಕಲಾವಿದನ ಪ್ರತಿಯೊಂದು ಸರಿ ತಪ್ಪುಗಳನ್ನು ಬರೆದುಕೊಂಡು ಪ್ರದರ್ಶನ ಮುಗಿದ ಮೇಲೆ ಎಲ್ಲಿ ತಪ್ಪಾಗಿದೆ ಅದನ್ನು ಹೇಗೆ ಸರಿಪಡಿಸಿಕೊಳ್ಳಬೇಕು ಎಂಬುದನ್ನು ಮನದಟ್ಟಾಗುವಂತೆ ತಿಳಿಸಿಕೊಡುತ್ತಿದ್ದರು. ರಂಗಕ್ಕೆ ಪ್ರವೇಶಿಸುವ ಮೊದಲೂ ಕಲಾವಿದರಲ್ಲಿ ಮಾತನಾಡಿ ಯಾವ ಪದ್ಯಕ್ಕೆ ಯಾವ ರೀತಿ ಅರ್ಥ ಹೇಳಬೇಕು ಇದರ ಬಗ್ಗೆ ಸೂಚಿಸಿ ಸಲಹೆಗಳನ್ನು ನೀಡಿಯೇ ಮಾನಸಿಕವಾಗಿ ಸಿದ್ಧ ಪಡಿಸುತ್ತಿದ್ದರು. ಅವರ ರಂಗ ನಿರ್ದೇಶನದಲ್ಲಿ ಕಲಾವಿದರ ಅರ್ಥಗಾರಿಕೆಯಾಗಲೀ, ನಾಟ್ಯವಾಗಲಿ ಒಂದು ಮಿತಿಯಲ್ಲೇ ಇರಬೇಕು. ದೀರ್ಘ ಆಗುವಂತಿಲ್ಲ. ಅಲ್ಲದೆ ಯಾವುದೇ ಪ್ರಸಂಗ ಸಾಹಿತ್ಯದ ಪದ್ಯಗಳಿರಲಿ ಅನವಶ್ಯಕ ಆಲಾಪನೆ, ಪುನರಾವರ್ತನೆ ಇದ್ದುದಿಲ್ಲ. ಎರಡಕ್ಕಿಂತ ಹೆಚ್ಚು ಬಾರಿ ಯಾವುದೇ ಸಾಲನ್ನು ಹಾಡಿದ್ದು ಕಡಿಮೆ ಎಂದೆನ್ನಬಹುದು. ಕೊನೆಯ ಬಾರಿ ಅವರೊಂದಿಗೆ ನಾನು ಮಾತನಾಡಿದ್ದು ಕಳೆದೆರಡು ತಿಂಗಳ ಹಿಂದೆ ಒಂದು ಪ್ರದರ್ಶಕ್ಕಾಗಿ ಅವರು ನನ್ನನ್ನು ಸಂಪರ್ಕಿಸಿದ್ದರು. ಎಪ್ರಿಲ್ ತಿಂಗಳಲ್ಲಿ ಅವರು ನಿರ್ಗಮಿಸಿದ ಸುದ್ದಿ ಬಂದಿದೆ. ಅಪಾರ ದುಃಖವಾಗಿದೆ. ಕೀರ್ತಿಶೇಷರ ಅಗಲಿಕೆಯಿಂದ ಯಕ್ಷಗಾನದ ಹಿರಿಯ ಕೊಂಡಿ ಕಳಚಿಕೊಂಡಂತಾಗಿದೆ. ಅವರ ಅಗಲಿಕೆಯ ನೋವನ್ನು ಸಹಿಸುವಂತಹಾ ಶಕ್ತಿ ಅವರ ಕುಟುಂಬಿಕರಿಗೆ ಆ ದೇವರು ನೀಡಲಿ ಎಂಬ ಪ್ರಾರ್ಥನೆ. ಮೇರು ಕಲಾವಿದ ದಿ. ಸುಬ್ರಹ್ಮಣ್ಯ ಧಾರೇಶ್ವರರಿಗೆ ಭಾವಪೂರ್ಣ ಶ್ರದ್ಧಾಂಜಲಿ.. ***ನಿಮ್ಮವನೆ, ಗೋವಿಂದ ವಂಡಾರು***

---

## ಸಂಪಾದಕೀಯ

***ಆತ್ಮೀಯ ಓದುಗರೆ,***

ಯಕ್ಷಗಾನದ ಮೂಲಸ್ವರೂಪದ ಬಗ್ಗೆ ಆಗಾಗ್ಗೆ ವಿವಿಧ ವೇದಿಕೆ, ಮಾಧ್ಯಮ, ಸಂದರ್ಭಗಳಲ್ಲಿ ಚರ್ಚೆಯಾಗ್ತಾ ಇರುತ್ತೆ. ಕಾಲಾಂತರದ ಬದಲಾವಣೆಗಳ ಬಗ್ಗೆ ಹಿಂದಿನ ಸಂಚಿಕೆಯಲ್ಲಿ ಕೆಲವೊಂದು ವಿಚಾರಗಳನ್ನು ಕಲಾವಿದರಾದ ವಂಡಾರು ಗೋವಿಂದರವರೂ ಉಲ್ಲೇಖ ಮಾಡಿದ್ದರು. ಅದಲ್ಲದೇ ನಮ್ಮ ಪತ್ರಿಕೆಯಲ್ಲೇ ಪ್ರಕಟವಾದ ಕಲಾವಿದರ ಸಂದರ್ಶನಗಳಲ್ಲಿ ಕಲಾವಿದರು ಅವರು ನೋಡಿದಂತಹ ಬದಲಾವಣೆಗಳನ್ನು ಹಂಚಿಕೊಂಡದ್ದಿದೆ. ಅವರವರ ಕಾಲಮಾನದಲ್ಲಿ ಇದ್ದಂತಹ ವ್ಯವಸ್ಥೆ ಸ್ವರೂಪದ ಬಗ್ಗೆ ಒಂದು ಸ್ಪಷ್ಟ ಚಿತ್ರಣ ಖಂಡಿತ ಸಿಗುತ್ತದೆ. ಆದರೆ ಯಕ್ಷಗಾನದ ಹುಟ್ಟು ಸ್ವರೂಪ ಹೇಗಿತ್ತು ಅನ್ನೋದ್ರ ಬಗ್ಗೆ ಹುಡುಕೋದು ಸವಾಲಿನ ಕೆಲಸವೇ ಹೌದು. ಯಾಕೆಂದರೆ ಯಕ್ಷಗಾನ ನಿರ್ದಿಷ್ಟವಾಗಿ ಇದೇ ಕಾಲದಲ್ಲಿ, ಇದೇ ಸ್ವರೂಪದಲ್ಲಿ ಹುಟ್ಟಿ ಬೆಳೆದು ಬಂತು ಎಂದು ಹೇಳೋದಕ್ಕೆ ಸೂಕ್ತ ದಾಖಲೆಗಳಿಲ್ಲ. ಯಕ್ಷಗಾನ ಬೆಳೆದು ಬಂದ ಇತಿಹಾಸದ ಬಗ್ಗೆ ಒಬ್ಬೊಬ್ಬರು ಒಂದು ರೀತಿಯ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುತ್ತಾರೆ. ಸುಮಾರು ಹನ್ನೆರಡನೇ ಶತಮಾನದಿಂದೀಚೆ ಈ ಪ್ರಕಾರವೊಂದು ಬೆಳೆದು ಬಂದಿರಹುದೆಂಬ ಹೇಳಿಕೆಯನ್ನು ಹೆಚ್ಚಿನವರು ಒಪ್ಪಿಕೊಂಡಿದ್ದಾರೆ. ಯಕ್ಷಗಾನದ ಕುರಿತು ಸಾರ್ಣದೇವನ "ಸಂಗೀತ ರತ್ನಾಕರ"ದಲ್ಲಿ (೧೨೧೦ ಕ್ರಿಶ) ಮೊದಲು ಉಲ್ಲೇಖಗೊಂಡಿದ್ದು "ಜಕ್ಕ" ಎಂಬುದು ಮುಂದೆ "ಯಕ್ಕಲಗಾನ" ಎಂದು ಕರೆಸಲ್ಪಟ್ಟಿತು ಎಂಬ ಅಭಿಪ್ರಾಯವಿದೆ. ಗಂಧರ್ವ ಗ್ರಾಮ ಎಂಬ ಈಗ ನಶಿಸಿ ಹೋಗಿರುವ ಗಾನ ಪದ್ದತಿಯಿಂದ ಗಾನ ಮತ್ತು ಸ್ವತಂತ್ರ ಜಾನಪದ ಶೈಲಿಗಳಿಂದ ನೃತ್ಯ ರೂಪುಗೊಂಡಿತೆಂದು ಶಿವರಾಮ ಕಾರಂತರ "ಯಕ್ಷಗಾನ ಬಯಲಾಟ" ಎಂಬ ಸಂಶೋಧನಾ ಪ್ರಬಂಧಗಳ ಸಂಕಲನದಲ್ಲಿ ಹೇಳಿದೆ. ೧೫೦೦ ರಷ್ಟರಲ್ಲಿ ವ್ಯವಸ್ಥಿತವಾಗಿ ಯಕ್ಷಗಾನ ರೂಢಿಯಲ್ಲಿತ್ತು ಎಂಬುದು ಬಹಳ ವಿದ್ವಾಂಸರು ಒಪ್ಪುವ ವಿಚಾರ.

ಯಕ್ಷಗಾನದ ಹುಟ್ಟು ಸ್ವರೂಪದ ಬಗ್ಗೆ ಯಾವುದೇ ಚಿಕ್ಕ ಕುರುಹೂ ಸಿಗದೇ ಇರುವುದು ಬಹಳ ಆಶ್ಚರ್ಯದ ಸಂಗತಿ. ಯಾಕೆಂದರೆ ಅದೆಷ್ಟೋ ಜನಪದ ಕಲೆಗಳು ಮೂಲಸ್ವರೂಪದಲ್ಲಿ ದಾಖಲೆಗೆ ಸಿಕ್ಕಿವೆ. ಅದೆಷ್ಟೋ ಕಲೆಗಳು ನಾಶವಾಗಿದ್ದೂ ಇದೆ. ಮೂಲ ಸ್ವರೂಪ ಸಂಪೂರ್ಣವಾಗಿ ಕಣ್ಮರೆಯಾಗಿರಬಹುದು.

ಕಥಕ್ಕಳಿ, ಮೋಹಿನಿ ಆಟ್ಟಂ, ಕೂಚುಪುಡಿ, ಭರತನಾಟ್ಯ, ದೊಡ್ಡಾಟ, ಬಯಲಾಟ, ರಾಸಲೀಲಾ, ಗರ್ಭಾ, ಲಾವಣಿ ಕೋಲಾಟ, ಕಂಸಾಳೆ, ವೀರಭದ್ರ ಕುಣಿತ ಹೀಗೆ ಎಲ್ಲ ಕಲೆಗಳೂ ಮೂಲತಃ ಜನಪದ ಕಲೆಗಳೇ. ಜನಪದ ಕಲೆಗೆ ಸಾರ್ವತ್ರಿಕವಾಗಿ ಆಕರ್ಷಿಸುವ ಅಂತಃಸತ್ವ ಇದೆ. ಅದಕ್ಕೆ ಬಲವಾದ ಉದಾಹರಣೆ ಎಂದರೆ ಯಕ್ಷಗಾನ. ಜನಪದರಿಂದ ದೇವಸ್ಥಾನಗಳ ಹೊರಗೆ ನಡೆಯುತ್ತಿದ್ದ, ಹಿಂದೆ ಕೆಳ ಸ್ತರದವರೆಂದು ಕರೆಸಿಕೊಳ್ಳುತ್ತಿದ್ದ ಜನರಿಂದ ಹುಟ್ಟಿ ಪೋಷಿಸಲ್ಪಟ್ಟ ಕಲೆ ಇಂದು ಎಲ್ಲ ವರ್ಗದವರನ್ನು ಸೆಳೆದುಕೊಂಡು ಬಿಟ್ಟಿದೆ. ಕರ್ನಾಟಕವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಪರಿಚಯಿಸಿದ ಕಲೆ ಯಕ್ಷಗಾನ ಎಂದರೆ ತಪ್ಪಿಲ್ಲ. ಇಂದು ಶಾಸ್ತ್ರೀಯ, ಸಾಂಪ್ರದಾಯಿಕ ಹೆಜ್ಜೆಗಾರಿಕೆ, ವೇಷಭೂಷಣ, ಮಾತುಗಾರಿಕೆ, ಛಂದಸ್ ಹೀಗೆ ನಿಯಮಗಳನ್ನು ರೂಪಿಸಿಕೊಂಡು ಬೆಳವಣಿಗೆಯಾದ ಕಲೆಯ ಪೂರ್ವ ರೂಪದ ಬಗ್ಗೆ ಕುತೂಹಲವೊಂದು ಮೂಡುತ್ತದೆ. ಯಕ್ಷಗಾನ ಶುದ್ಧ ಜನಪದ ಕಲೆ ಅನ್ನೋದು ನಿಜ. ಹಾಗಾದರೆ ಇದಕ್ಕೆ ಮೂಲ ಜನಪದ ಸ್ವರೂಪವೊಂದು ಇದ್ದಿರಬೇಕಲ್ಲ? ಅದು ಹೇಗಿದ್ದಿರಬಹುದು? ಇಂತಹ ಕುತೂಹಲಗಳು ಸಹಜವೇ. ಹೆಚ್ಚಿನ ಜನಪದ ಕಲೆಗಳನ್ನು ಗಮನಿಸಿದಾಗ ಜನಪದ ಶೈಲಿಯೇ ಒಂದು ರೀತಿಯದ್ದಾಗಿದೆ. ಇಂತದ್ದೇ ನೀತಿ ನಿಯಮ, ಶಾಸ್ತ್ರೀಯತೆ ಇಂತಹ ಚೌಕಟ್ಟುಗಳಿಲ್ಲ. ಅದು ಸ್ವತಂತ್ರವಾಗಿ ಮೂಡಿ ಬಂದಿರುವಂಥದ್ದು. ಆದರೆ ಯಕ್ಷಗಾನ ಎಂಬ ಜನಪದ ಕಲೆಯಲ್ಲಿ ಆ ಲಕ್ಷಣಗಳು ಇಲ್ಲ. ವೇಷಭೂಷಣದಲ್ಲಿ ಸಾಂಪ್ರಾಯಿಕತೆಗೊಂದು ನಿಯಮ ಇದೆ. ಹಿಮ್ಮೇಳಕ್ಕೂ ರಾಗ, ತಾಳ, ಮಟ್ಟು, ಇಂತಹ ಶಾಸ್ತ್ರೀಯತೆ ಇದೆ. ಸಾಹಿತ್ಯಕ್ಕೂ ನಿರ್ದಿಷ್ಟ ಪ್ರಕಾರದ ಛಂದಸ್ಸಿಗೆ ಒಳಪಟ್ಟಿದೆ. ಯಕ್ಷಗಾನದಲ್ಲಿರುವ ಶಾಸ್ತ್ರೀಯತೆ ಅದು ಹುಟ್ಟಿಕೊಂಡಾಗಿನ ಸ್ವರೂಪದಲ್ಲಿ ಹಾಗೆಯೇ ಇತ್ತೇ? ಹಿಂದಿನ ಜನಪದರಿಗೆ ಛಂದಸ್ಸಿನ ಜ್ಞಾನವಿತ್ತೇ? ರಾಗ, ತಾಳ, ಮಟ್ಟು, ತಿಟ್ಟುಗಳ ಜ್ಞಾನವಿತ್ತೇ? ಸುಸಂಸ್ಕೃತ ಭಾಷೆ, ಸಂಸ್ಕೃತದ ಅರಿವಿತ್ತೇ? ತುಳು ಪಾಡ್ದನ ಅಥವ ಇತರ ಜನಪದ ಕಲೆ, ಪ್ರದರ್ಶನ ಕಲೆ; ದೊಡ್ಡಾಟ, ಜಾಲಾಟಗಳನ್ನು ಗಮನಿಸಿದಾದ ನಿರ್ದಿಷ್ಟ ಸಾಹಿತ್ಯ ಕುಣಿತ, ವೇಷಭೂಷಣಗಳಿಗೆ ಶಾಸ್ತ್ರೀಯ ನಿಯಮಗಳು ಕಂಡುಬರೋದಿಲ್ಲ. ಪಾಡ್ದನಗಳು ಹೇಗಿದ್ದವೋ ಅದೇ ರೂಪದಲ್ಲಿ ದಾಖಲಾಗಿವೆ. ಹಿಂದಿನ ಜನಪದರಿಗೆ ಛಂದಸ್ಸಿನ ರಾಗ, ತಾಳಗಳ ಜ್ಞಾನ ಇದ್ದಿರಬಹುದಾದ ಸಾಧ್ಯತೆ ಬಹಳ ಕಡಿಮೆ. ಇತಿಹಾಸದ ಪುಟಗಳನ್ನು ತಿರುವಿದಾಗ ಕ್ರಿ.ಶ ೧೬೦೦ ರಲ್ಲಿ ಜೀವಿಸಿದ್ದ ಪಾರ್ತಿಸುಬ್ಬ ಎಂಬ ಕವಿ ಯಕ್ಷಗಾನ ಪ್ರಯೋಗಕ್ಕೆ ಶಾಸ್ತ್ರೀಯತೆಯ ಚೌಕಟ್ಟನ್ನು ಕೊಟ್ಟಿರುವಂತಹ ನಿದರ್ಶನಗಳಿವೆ. ಕಾಲ ಬದಲಾವಣೆಯಾದಂತೆ ಈ ಕಲಾ ಪ್ರಕಾರವನ್ನು ಉನ್ನತೀಕರಿಸುವಂತಹ ಪ್ರಯತ್ನಗಳು ಬಹಳ ನಡೆದಿದ್ದಂತೂ ಸುಳ್ಳಲ್ಲ. ಶಿಕ್ಷಿತ ವರ್ಗ ಸಾಹಿತ್ಯಕ್ಕೆ ಛಂದಸ್ಸಿನ ನಿಯಮಗಳನ್ನು, ಕುಣಿತಕ್ಕೆ ನಾಟ್ಯದ ನಿಯಮಗಳನ್ನು, ವೇಷಭೂಷಣಕ್ಕೆ ಅಗತ್ಯ ನಿಯಮಗಳು, ಹಿಮ್ಮೇಳಕ್ಕೆ ರಾಗ, ತಾಳ ಮಟ್ಟುಗಳ ನಿರ್ದಿಷ್ಟ ಸ್ವರೂಪವನ್ನು ಯಕ್ಷಗಾನಕ್ಕೆ ಪರಿಚಯಿದ್ದಿರಬಹುದು. ಅದರ ಪ್ರತಿಫಲನವೇ ಇಂದು ನಾವು

ನೋಡುತ್ತಿರುವ ಸುಸಂಸ್ಕೃತ ಯಕ್ಷಗಾನ. ಹಾಗಿದ್ದರೆ ಹಿಂದಿನ ಯಕ್ಷಗಾನದ ಭಾಗವತಿಕೆಯ, ಸಾಹಿತ್ಯದ, ರಾಗ ಬಳಕೆಯ ಸ್ವರೂಪ ಹೇಗಿತ್ತು? ಈ ವಿಚಾರಗಳು ಎಲ್ಲಿಯೂ ದಾಖಲಾಗಿಲ್ಲ. ಅಥವ ಉದ್ದೇಶಪೂರ್ವಕವಾಗಿ ಅದನ್ನು ಮರೆಪಡಿಸಿರುವ ಸಾಧ್ಯತೆಗಳಿರಬಹುದೇ? ಹಾಗೆ ಮರೆಪಡಿಸಿರುವ ಸಂದರ್ಭ ಇರುವುದೇ ಆದರೆ ಅದಕ್ಕೆ ಎರಡೆ ಕಾರಣಗಳು ಒಂದು ಯಕ್ಷಗಾನ ಬಹಳ ಸತ್ವಯುತ ಕಲೆಯಾಗಿದ್ದು ಅದನ್ನು ಪ್ರಯತ್ನಪೂರ್ವಕವಾಗಿ ಮರೆಮಾಚುವ ಉದ್ದೇಶ. ಎರಡನೆಯದು ಯಕ್ಷಗಾನದಲ್ಲಿ ಕಳಪೆ ಮನರಂಜನಾತ್ಮಕ ಅಂಶಗಳಿದ್ದು ಅದನ್ನು ಮರೆಮಾಚುವ ಉದ್ದೇಶ. ಯಕ್ಷಗಾನ ಸಭಾ ಲಕ್ಷಣ ಎನ್ನುವಂತಹ ಪುಸ್ತಕದಲ್ಲಿ ಯಕ್ಷಗಾನದಲ್ಲಿ ತೀರಾ ಅಸಬಂದ್ದ, ತುಚ್ಛವಾದ ಸಾಹಿತ್ಯಗಳಿತ್ತು ಎಂಬುದಕ್ಕೆ ಉದಾಹರಣೆಗಳಿವೆ. ಅದಕ್ಕಾಗಿಯೋ ಏನೋ ಯಕ್ಷಗಾನ ಪ್ರದರ್ಶನ ನೋಡಿದ್ರೆ ಏಳು ರಂಗಪೂಜೆ ನೋಡಬೇಕು ಎಂಬ ಕಟ್ಟುಪಾಡು ಇದ್ದಿರಬಹುದು. ಯಕ್ಷಗಾನ ಮೌಲ್ಯಯುತ ಕಲೆಯಾಗಿತ್ತೋ ಅಥವ ಕಳಪೆ ಮಟ್ಟದ ಪ್ರಸ್ತುತಿಯಾಗಿತ್ತೋ ಇದರ ಬಗ್ಗೆ ಇದಮಿತ್ಥಂ ಎಂದು ಹೇಳಬಹುದಾದ ನಿಖರ ದಾಖಲೆಗಳಿಲ್ಲ.

ಯಕ್ಷಗಾನ ಹಿಂದೆ ವರ್ಗ ವ್ಯವಸ್ಥೆಯಲ್ಲಿ ತಳ ಮಟ್ಟದ ಜನರಿಂದ ಪ್ರಾರಂಭವಾದ ಕಲೆ ಎಂಬುದಾಗಿ ಸಂಶೋಧಕರು ತಿಳಿಸುತ್ತಾರೆ. ಹಾಗೆಯೇ ದೇವಸ್ಥಾನದ ಹೊರಾಂಗಣದಲ್ಲಿ ಪ್ರದರ್ಶನವಾಗುತ್ತಿತ್ತು. ಅಲ್ಲದೆ ಕೃಷಿ ಚಟುವಟಿಕೆಗಳು ಇಲ್ಲದಿರುವ ಕಾಲದಲ್ಲಿ ಕೆಳ ವರ್ಗದ ಜನರಿಗೆ ಮನರಂಜನಾ ಮಾಧ್ಯಮವಾಗಿತ್ತು ಎಂಬ ವಿಚಾರಗಳನ್ನು ಗಮನಿಸಬಹುದು. ಅಂತಹ ಮಡಿ ವ್ಯವಸ್ಥೆಯಲ್ಲಿ ಪರಿಶಿಷ್ಟವಾಗಿದ್ದ ಕಲೆ ಎಲ್ಲ ವರ್ಗದವರೂ ಅಪ್ಪಿಕೊಂಡು ಬೆಳೆಸಿದ ನಂತರ ಯಕ್ಷಗಾನದ ಮೂಲ ಸ್ವರೂಪ ಧರ್ಮ ಪ್ರಸಾರ ಎಂಬುದಾಗಿ ಬಿಂಬಿತವಾಯಿತು. ಪ್ರಸ್ತುತ ಕಾಲಮಾನದಲ್ಲಿ ಮತ್ತೆ ಯಕ್ಷಗಾನ ಮನರಂಜನಾ ಮಾಧ್ಯಮವಾಗಿ ಹೊರಳಿದೆ. ಮನರಂಜನೆ ಎಂಬ ವಿಚಾರ ಬಂದಾಗ ಬೇಕಾದ್ದು ಬೇಡದ್ದು ಎಲ್ಲವೂ ಸೇರಿಕೊಳ್ಳುವುದು ಸಹಜ. ಕೆಲವರು ಯಕ್ಷಗಾನ ನಿರ್ದಿಷ್ಟ ಕ್ರಮವನ್ನು (ಯಕ್ಷಗಾನೀಯ ಹೆಜ್ಜೆಗಳು, ಸಾಹಿತ್ಯ, ರಾಗ ಮಟ್ಟು ತಿಟ್ಟುಗಳು) ಬಿಟ್ಟು ಹೋದರೆ ಅದು ಯಕ್ಷಗಾನ ಎಂದೆನಿಸಿಕೊಳ್ಳುವುದಿಲ್ಲ ಎಂಬುದನ್ನು ಬಲವಾಗಿ ಪ್ರತಿಪಾದಿಸಿದರೆ, ಮತ್ತೂ ಕೆಲವರು ಯಕ್ಷಗಾನೀಯವಾಗಿ ಭಾವಗೀತೆ, ಚಿತ್ರಗೀತೆ, ಭಜನಾ ಹಾಡುಗಳು, ಹಾಡುವುದು ತಪ್ಪಲ್ಲ ಎಂದು ಪ್ರತಿಪಾದಿಸುವ ವರ್ಗ. ಈ ಎಲ್ಲ ಗೊಂದಲಕ್ಕೆ ಮುಖ್ಯ ಕಾರಣವೇ ಯಕ್ಷಗಾನದ ಮೂಲ ಸ್ವರೂಪದ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು. ಏನೇ ಆಗ್ಲಿ ಯಕ್ಷಗಾನದಲ್ಲಿ ಯಾವುದಿರಬೇಕು, ಯಾವುದಿರಬಾರದು ಅನ್ನೋದನ್ನೇ ಕಾಲವೇ ತೀರ್ಮಾನಿಸಬೇಕು. – ***ಶುಭಾಶಯ***

# ಉಡುಪಿಯ ಕಲೆಗೆ ರಾಜ ವೇದಿಕೆ..

## ಕಲಾ ಚಟುವಟಿಕೆಗಳಿಗೆ ಸುಸಜ್ಜಿತ ಭವ್ಯ ವೇದಿಕೆ ಮತ್ತು ಅಧ್ಯಯನ ಕೇಂದ್ರ – IYC


ಹೌದು.. ಉಡುಪಿಯ ಶಾರದಾ ಕಲ್ಯಾಣ ಮಂಟಪ ರಸ್ತೆಯಲ್ಲಿ ಯಕ್ಷಗಾನ ಕಲಾರಂಗದ ನೂತನ ಕಟ್ಟಡವೊಂದು ತಲೆಯೆತ್ತಿದೆ. ಕಾರ್ಪೋರೇಟ್ ದೇಣಿಗೆಯನ್ನು ಪಡೆದುಕೊಂಡು ನಿರ್ಮಿಸಲಾಗಿರುವ ಇನ್‌ಫೋಸಿಸ್ ಫೌಂಡೇಷನ್ ಯಕ್ಷಗಾನ ಡೆವಲಪ್‌ಮೆಂಟ್ ಮತ್ತು ರಿಸರ್ಚ್ ಸೆಂಟರ್ ರಾಷ್ಟ್ರಮಟ್ಟದಲ್ಲಿ ಗುರುತಿಕೊಳ್ಳಬಹುದಾದ ಬೃಹತ್ ಭವ್ಯ ಸುಸಜ್ಜಿತ ಕಲಾ ಸಂಶೋಧನಾ ಕೇಂದ್ರ. ತರಬೇತಿ, ಉಪನ್ಯಾಸ, ಸಂಶೋಧನೆ, ಅಧ್ಯಯನ, ಕಮ್ಮಟ, ಗೋಷ್ಠಿ, ಕಲಾಪ್ರದರ್ಶನ, ವೈಚಾರಿಕ ಸಭೆ, ಹೀಗೆ ವಿವಿಧ ಉದ್ದೇಶಗಳಿಗೆ ಈ ಕೇಂದ್ರ ಸೂಕ್ತ ವ್ಯವಸ್ಥೆಗಳಿಂದ ಸಜ್ಜುಗೊಂಡಿದ್ದು ಜಿಲ್ಲೆ, ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಕಲಾವಿದರ ಪ್ರತಿಭಾ ಪ್ರದರ್ಶನಕ್ಕೆ ಕೈ ಬೀಸಿ ಸ್ವಾಗತಿಸುತ್ತಿದೆ. ಬರೋಬ್ಬರಿ 15 ಕೋಟಿ ರೂಗಳ ಮೊತ್ತದಲ್ಲಿ ನಿರ್ಮಾಣಗೊಂಡ ವೈಭವದ ಭವನ ಸಾಕಾರಗೊಂಡಿರುವುದು ಯಕ್ಷಗಾನ ಕಲಾಕೇಂದ್ರ ಉಡುಪಿ ಇದರ ಫಲಿಸಿದ ಭಗೀರಥ ಯತ್ನ ಎಂದರೆ ತಪ್ಪಿಲ್ಲ. ಯಕ್ಷಗಾನ ಕಲಾರಂಗ ಸ್ಥಾಪನೆಯಾಗಿ ಸುವರ್ಣ ಮಹೋತ್ಸವದ ಸಂಭ್ರಮದಲ್ಲಿರುವ ಈ ಹೊತ್ತಲ್ಲಿ ಈ ಕಟ್ಟಡ ಕಲಾಕ್ಷೇತ್ರಕ್ಕೊಂಡು ಅಮೂಲ್ಯ ಕೊಡುಗೆಯೇ ಸರಿ.




### ಸುಸಜ್ಜಿತ ಕಟ್ಟಡದಲ್ಲಿರುವ ವ್ಯವಸ್ಥೆಗಳು

ಮಳೆಗಾಲದ ಪ್ರದರ್ಶನಗಳೆಂದರೆ ಆಯೋಜನೆಗೊಂಡ ಸ್ಥಳಗಳಲ್ಲಿ ಯಕ್ಷಗಾನ ಕಲಾವಿದರಿಗೆ ಸರಿಯಾದ ವ್ಯವಸ್ಥೆಗಳ ಕೊರತೆ, ಸಂಘಟಕರಿಗೂ ಪರದಾಟ. ಈಗ ಇದಕ್ಕೆಲ್ಲ ಒಂದು ಅಂತ್ಯ ಬಂದಿದೆ. ಜನಸ್ನೇಹಿ ದರದಲ್ಲಿ, ಉತ್ತಮ ಗುಣಮಟ್ಟದ, ಹವಾನಿಯಂತ್ರಿತ, ಆರಾಮ ಕುರ್ಚಿಯ, ಪಾರ್ಕಿಂಗ್ ವ್ಯವಸ್ಥೆ, ವಾಹನ ಹಾಗೂ ಜನಸಂದಣಿಯ ತೊಂದರೆಗಳಿಂದ ಮುಕ್ತವಾದ, ಉತ್ತಮ ಬೆಳಕಿನ ವ್ಯವಸ್ಥೆ, ಊಟದ ವ್ಯವಸ್ಥೆಗೆ, ಅಡುಗೆಗೆ ಕಿಚನ್, ಸಭೆ ನಡೆಸಲು ಮೀಟಿಂಗ್ ಹಾಲ್, ಕಲಾವಿದರಿಗೆ ಉಳಿದುಕೊಳ್ಳುವ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ ಇಂತಹ ಆಧುನಿಕ ತಂತ್ರಜ್ಞಾನ, ಸೌಕರ್ಯಗಳನ್ನು ಹೊಂದಿದ್ದು, ಎಲ್ಲಾ ಪ್ರಕಾರದ ಕಲೆಗಳಿಗೆ ಗೌರವಪೂರ್ವಕವಾಗಿ ಸಂದಿರುವ ರಾಜವೇದಿಕೆ ಎನ್ನಬಹುದು. 35 ಸೆಂಟ್ಸ್ ಜಾಗದಲ್ಲಿ 30 ಸಾವಿರ ಚದರ ಅಡಿಯ ಕಟ್ಟಡದ ಬೇಸ್ ಮೆಂಟ್‌ನಲ್ಲಿ ಅಡುಗೆ ಮನೆ, ಭೋಜನ ಶಾಲೆ, ಸೆಕ್ಯೂರಿಟಿ ವಾಸ್ತವ್ಯ ಕೊಠಡಿ, ನೆಲ ಅಂತಸ್ತಿನಲ್ಲಿ 266 ಆಸನಗಳ ಸುಸಜ್ಜಿತ ಸಭಾಂಗಣ, ಮೊದಲ ಮಹಡಿಯಲ್ಲಿ 122 ಆಸನಗಳ ಬಾಲ್ಕನಿ, ಹಿಂಭಾಗದಲ್ಲಿ ಕಲಾರಂಗದ ಕಛೇರಿ, 2ನೇ ಅಂತಸ್ತಿನಲ್ಲಿ 60 ಆಸನ ಸಾಮರ್ಥ್ಯದ ಕಾನ್ಫರೆನ್ಸ್ ರೂಂ, ಬೋರ್ಡ್ ರೂಂ,

ಲೈಬ್ರರಿ, ಅಧ್ಯಯನ ಕೇಂದ್ರದ ಕೊಠಡಿ ಹಾಗೂ ಐದು ಬೆಡ್ ರೂಮ್‌ಗಳಿವೆ. ಯಕ್ಷಗಾನಕ್ಕೆ ಇಂತಹ ದುಬಾರಿ ವ್ಯವಸ್ಥೆಯ ಸಭಾಂಗಣ ಬೇಕಿರಲಿಲ್ಲ ಎಂಬುದು ಕೆಲವರ ಅನಿಸಿಕೆಯಾದರೂ ಈ ಐಶಾರಾಮಿ ವ್ಯವಸ್ಥೆಯ ಸಭಾಂಗಣ, ಕಟ್ಟಡ ದೇಶ ವಿದೇಶಗಳ ಕಲಾವಿದರನ್ನು ಸೆಳೆಯುವುದರಲ್ಲಿ ಅನುಮಾನವೇ ಇಲ್ಲ. ಅಲ್ಲದೆ ಈ ಭವನ ಉಡುಪಿ ಜಿಲ್ಲೆಯ ಕೀರ್ತಿಯನ್ನು ಎತ್ತಿ ಹಿಡಿಯಲಿದೆ.



ಐವೈಸಿಯ ನೂತನ ಕಲಾಭವನ ಹಾಗೂ ಸಂಶೋಧನಾ ಕೇಂದ್ರ ೨೦೨೪ರ ಎಪ್ರಿಲ್ 21ರಂದು ಲೋಕಾರ್ಪಣೆಗೊಂಡಿದ್ದು ಉಡುಪಿ ಶ್ರೀ ಕೃಷ್ಣ ಮಠದ ಪರ್ಯಾಯ ಮಠಾಧೀಶ ಶ್ರೀ ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು, ಹಾಗೂ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದರ ಅನುಗ್ರಹ ಮಂತ್ರಾಕ್ಷತೆಯೊಂದಿಗೆ ಕಟ್ಟಡದ ಲೋಕಾರ್ಪಣ ಕಾರ್ಯಕ್ರಮ ನಡೆದಿದೆ. ಈ ಕಾರ್ಯಕ್ರಮಕ್ಕೆ ಕೃಷ್ಣಾಪುರ ಮಠದ ಶ್ರೀ ವಿದ್ಯಾಸಾಗರ ತೀರ್ಥ ಸ್ವಾಮೀಜಿ, ಕಾಣಿಯೂರು ಮಠದ ಶ್ರೀ ವಿದ್ಯಾ ವಲ್ಲಭ ತೀರ್ಥ ಸ್ವಾಮೀಜಿ, ಶಿರೂರು ಮಠದ ಶ್ರೀ ವೇದವರ್ಧನ ತೀರ್ಥ ಸ್ವಾಮೀಜಿ ಇವರೊಂದಿಗೆ ಇನ್‌ಫೋಸಿಸ್ ಫೌಂಡೇಷನ್‌ನ ವಿಶ್ವಸ್ಥ ಸುನಿಲ್ ಕುಮಾರ್ ಧಾರೇಶ್ವರ್, ಮಾಹೆ ಸಹಕುಲಾಧಿಪತಿ ಡಾ. ಎಚ್.ಎಸ್. ಬಲ್ಲಾಳ್, ಡಾ. ನಿ.ಬಿ ವಿಜಯ್ ಬಲ್ಲಾಳ್, ಡಾ. ಜಿ ಶಂಕರ್ ಮತ್ತಿತರರು ಲೋಕಾರ್ಪಣಾ ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ಕಲಾರಂಗದ ನೂತನ ವೇದಿಕೆಯಲ್ಲಿ ಈಗಾಗಲೇ ಕಲಾವಿದರ ಕಲರವ ಮೊಳಗಿದೆ. ಒಡಿಸ್ಸಿ ನೃತ್ಯ ಪ್ರದರ್ಶನ, ಕಥಕ್ಕಳಿ, ತಾಳಮದ್ದಳೆ, ತೆಂಕು, ಬಡಗು ಯಕ್ಷಗಾನ ಪ್ರದರ್ಶನ ನಡೆದಿದ್ದು ವ್ಯವಸ್ಥಿತವಾಗಿ ಯಶಸ್ವಿಯಾಗಿ ಮೂಡಿ ಬಂದಿದೆ. ಅಷ್ಟೇ ಅಲ್ಲದೆ ವಾರದಲ್ಲಿ ಕನಿಷ್ಠ ನಾಲ್ಕರಿಂದ ಐದು ದಿನ ಈ ಭವನದಲ್ಲಿ ಚಟುವಟಿಕೆಗಳು ನಡೆಯುವಂತೆ ಯೋಜನೆಗಳನ್ನು ಹಾಕಿಕೊಂಡಿದ್ದು ನಿರಂತರವಾಗಿ ಈ ಭವನದಲ್ಲಿ ಗೆಜ್ಜೆ ಸದ್ದು ನಾದ ಹೊಮ್ಮಿಸಲಿದೆ.

## ಯಕ್ಷಗಾನ ಪ್ರದರ್ಶನಕ್ಕೆ ಅನ್ವಯಿಸಲಿದೆ ಕಾರ್ಪೋರೇಟ್ ಶಿಸ್ತು

ಈ ಮಲ್ಪಿ ಪರ್ಪಸ್ ಕಟ್ಟಡದ ನಿರ್ವಹಣೆಯ ಹೊಣೆ ಯಕ್ಷಗಾನ ಕಲಾರಂಗದ್ದಾಗಿದ್ದು, ಇಲ್ಲಿ ಕಾರ್ಯಕ್ರಮ ಆಯೋಜಿಸುವ ಹಾಗೂ ಪ್ರದರ್ಶಿಸುವ ತಂಡಗಳಿಗೆ ಕನಿಷ್ಠ ನಿರ್ವಹಣಾ ವೆಚ್ಚವನ್ನು ಭರಿಸಬೇಕಾಗುತ್ತದೆ. ಅಲ್ಲದೆ ಸಭಾಂಗಣದಲ್ಲಿ ಶಿಸ್ತು ಪಾಲನೆ ಹಾಗೂ ಉದ್ದೇಶದಿಂದ ಕೆಲವು ನಿಯಮಗಳನ್ನೂ ರೂಪಿಸಲಾಗಿದೆ. ಈ ಸಭಾಗಂಣವನ್ನು ಬಳಸುವ ಕಲಾವಿದರು, ಇಲ್ಲಿಗೆ ಭೇಟಿ ನೀಡುವ ಪ್ರೇಕ್ಷಕರು, ಕಲಾಭಿಮಾನಿಗಳು, ಸಂಸ್ಥೆಗಳು ಕಲಾರಂಗದ ಕೆಲವು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅಶಿಸ್ತಿನಿಂದ ವರ್ತಿಸುವಂತಿಲ್ಲ. ಕಾರ್ಯಕ್ರಮ ನಡೆಯುತ್ತಿರುವಾಗ ಹೆಚ್ಚು ಮೊಬೈಲ್ ಬಳಸುವಂತಿಲ್ಲ, ಪ್ರಶಾಂತತೆಯನ್ನು ಕಾಪಾಡಬೇಕು. ಕಾರ್ಯಕ್ರಮದ ಮಧ್ಯೆ ಆಗಾಗ್ಗೆ ಬಾಗಿಲು ತೆರೆದು ಪ್ರವೇಶ ನಿರ್ಗಮನ ಮಾಡುವಂತಿಲ್ಲ. ಪ್ಲಾಸ್ಟಿಕ್ ಬಳಕೆ ಮಾಡುವಂತಿಲ್ಲ. ಇಂತಹ ಇನ್ನು ಕೆಲವು ರೂಲ್ಸ್‌ಗಳನ್ನು ಪಾಲಿಸಬೇಕಾಗುತ್ತದೆ.

## ಸುವರ್ಣ ಸಂಭ್ರಮದಲ್ಲಿ ಯಕ್ಷಗಾನ ಕಲಾರಂಗ

1970ರ ಸಮಯದಲ್ಲಿ ಡಾ. ಬಿ.ಬಿ ಶೆಟ್ಟಿಯವರ ನೇತೃತ್ವದಲ್ಲಿ ಉತ್ಕೃಷ್ಟ ಮಟ್ಟದ ಕಲಾಪ್ರದರ್ಶನ ಮತ್ತು ಸಂಘಟನೆಯ ಕನಸಿನ ಫಲವಾಗಿ ಯಕ್ಷಗಾನ ಕಲಾರಂಗ ರೂಪು ತಳೆಯಿತು. 1975ರಲ್ಲಿ ಯಕ್ಷಗಾನಾಸಕ್ತರಾದ ಅಮ್ಮುಂಜೆ ನಾಗೇಶ್ ನಾಯಕ್, ನಿಟ್ಟೂರು ಸುಂದರ ಶೆಟ್ಟಿ, ಎಂ ಎಸ್ ಕೃಷ್ಣನ್, ಜಿ.ವಿ. ಶೆಣೈ, ಯು. ಉಪೇಂದ್ರ, ಕೆ. ವಿಶ್ವಜ್ಞ ಶೆಟ್ಟಿ ಮೊದಲಾದ ಸಮಾನ ಮನಸ್ಕರು ಒಟ್ಟುಗೂಡಿ ಸ್ಥಾಪಿಸಲು ಮುಂದಾದ ಈ ಸಂಸ್ಥೆಯನ್ನು 1975ರಲ್ಲಿ ಹಿರಿಯ ಸಾಹಿತಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕೋಟ ಶಿವರಾಮ ಕಾರಂತರು ಉದ್ಘಾಟಿಸಿದರು. ಪ್ರಸ್ತುತ ಯಕ್ಷಗಾನ ಕಲಾರಂಗದ ಅಧ್ಯಕ್ಷರಾಗಿ ಎಂ ಗಂಗಾಧರ ರಾವ್, ಕಾರ್ಯದರ್ಶಿಗಳಾಗಿ ಮುರಲಿ ಕಡೆಕಾರ್ ಮುನ್ನಡೆಸುತ್ತಿದ್ದು ಇವರೊಂದಿಗೆ ಉಪಾಧ್ಯಕ್ಷರು, ಜೊತೆ ಕಾರ್ಯದರ್ಶಿಗಳು ಹಾಗೂ ಕಾರ್ಯಕಾರಿ ಸಮಿತಿಯ ಒಟ್ಟು ಇಪ್ಪತ್ತೈದು ಜನ ಸದಸ್ಯರ ಆಡಳಿತ ಮಂಡಳಿ ಇದೆ. ಯಕ್ಷಗಾನ ಕಲಾರಂಗವು 37 ಮಹಾಪೋಷಕರು, 151 ಪೋಷಕರು, ಹಾಗೂ 1136 ಅಜೀವ ಸದಸ್ಯರನ್ನು ಹೊಂದಿದೆ.

**ಕಾರ್ಯ ಚಟುವಟಿಕೆಗಳು** – ಸಂಸ್ಥೆ ಈ ಹಿಂದೆ ದಶಮಾನ, ವಿಂಶತಿ ಹಾಗೂ ರಜತ ಸಂಭ್ರಮವನ್ನು ಆಚರಿಸಿಕೊಂಡಿದೆ. ಯಕ್ಷಗಾನ ಕಮ್ಮಟ, ವಿಚಾರ ಸಂಕಿರಣ, ಸ್ತ್ರೀ ವೇಷ ಕಮ್ಮಟ, ಯುವ ಭಾಗವತರ ಶಿಬಿರ, ಸಾಕ್ಷ್ಯ ಚಿತ್ರ, ಯಕ್ಷ ನೃತ್ಯ ಪ್ರಾತ್ಯಕ್ಷಿಕೆ, ಒಡ್ಡೋಲಗ ಪ್ರಾತ್ಯಕ್ಷಿಕೆ, ಮಕ್ಕಳ ಯಕ್ಷಗಾನ ಸ್ಪರ್ಧೆ, ಯಕ್ಷಗಾನ ಸ್ಪರ್ಧೆ, ದೊಂದಿ ಬೆಳಕಿನ ಯಕ್ಷಗಾನ, ಯಕ್ಷಗಾನ ಅಷ್ಟಾವಧಾನ, ಗಾನ ವೈವಿಧ್ಯ, ಏಕ ವ್ಯಕ್ತಿ ಯಕ್ಷಗಾನ, ತಾಳಮದ್ದಳೆ ಸಪ್ತಾಹ, ಶಿಬಿರ, ವಿಶೇಷ ಉಪನ್ಯಾಸ, ಸಂವಾದ, ಸಾಧಕರಿಗೆ ಅಭಿನಂದನೆ ಇಂತಹ ಕಾರ್ಯ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ. ಪ್ರತಿ ವರ್ಷ ಹಿರಿಯ ಸಾಧಕರಿಗೆ 20 ಸಾವಿರ ನಗದು ಪುರಸ್ಕಾರದೊಂದಿದೆ 20 ಕಲಾವಿದರಿಗೆ ಕಲಾರಂಗ ಪ್ರಶಸ್ತಿಯನ್ನು ನೀಡುತ್ತಿದೆ. ಯಕ್ಷಗಾನ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ವಾಂಸರಿಗೆ 40 ಸಾವಿರ ನಗದು ಪುರಸ್ಕಾರದೊಂದಿಗೆ ತಲ್ಲೂರು ಕನಕಾ ಅಣ್ಣಯ್ಯ ಶೆಟ್ಟಿ ಸ್ಮರಣಾರ್ಥ ಪ್ರಶಸ್ತಿ ಹಾಗೂ ಯಕ್ಷಗಾನಕ್ಕಾಗಿ ಸೇವೆ ಸಲ್ಲಿಸುತಿರುವ ಸಂಸ್ಥೆಗೆ 50 ಸಾವಿರ

ನಗದು ಪುರಸ್ಕಾರದ ಶ್ರೀ ವಿಶ್ವೇಶ ತೀರ್ಥ ಪ್ರಶಸ್ತಿ ಪ್ರದಾನ ಮಾಡುತ್ತಿದೆ. ಈವರೆಗೆ 21 ಸಂಸ್ಥೆಗಳು ಸೇರಿದಂತೆ ಸಾಧನೆ ಮಾಡಿದ ಹಿರಿಯ ಕಲಾವಿದರಿಗೆ ಒಟ್ಟು ೩೫೫ ಪ್ರಶಸ್ತಿಗಳನ್ನು ನೀಡಿದೆ. ಯಕ್ಷಗಾನ ಕಲಾರಂಗವು 1998 ರಲ್ಲಿ ಉದ್ಯಾವರ ಮಾಧವ ಆಚಾರ್ಯ ರವರಿಂದ ಪ್ರೊ. ಬಿ.ವಿ.ಆಚಾರ್ಯ ದತ್ತಿ ನಿಧಿ ಉದ್ಘಾಟನೆ ಮಾಡಿತು. ಯಕ್ಷಗಾನ ಕಲಾವಿದರ ಕ್ಷೇಮ ಚಿಂತನೆಯ ಉದ್ದೇಶದಿಂದ ಸಂಸ್ಥೆ ಪ್ರೊ.ಬಿ.ವಿ.ಆಚಾರ್ಯರ ಸ್ಮರಣಾರ್ಥ ವಿವಿಧ ವೃತ್ತಿ ಮೇಳಗಳ ಸುಮಾರು ೧೨೦೦ ಯಕ್ಷಗಾನ ಕಲಾವಿದರನ್ನೊಳಗೊಂಡ **'ಯಕ್ಷನಿಧಿ'** ಎಂಬ ಉಪಸಮಿತಿಯನ್ನು ಸ್ಥಾಪಿಸಿತು. ಕಲಾವಿದರು ಅನಾರೋಗ್ಯದಿಂದ ಆಸ್ಪತ್ರೆ ಸೇರಿದಾಗ ತುರ್ತು ಆರ್ಥಿಕ ನೆರವು, ಕಲಾವಿದರು ಆಕಸ್ಮಿಕವಾಗಿ ನಿಧನ ಹೊಂದಿದಾಗ ಅವರ ಕುಟುಂಬಕ್ಕೆ ಸಾಂತ್ವನ ರೂಪದಲ್ಲಿ ಆರ್ಥಿಕ ನೆರವು, ಯಕ್ಷಗಾನ ಕಲಾವಿದರಿಗೆ ರೂ. ಒಂದು ಲಕ್ಷ ಮೊತ್ತದ ಜೀವನ್ ಆನಂದ್ ಎಲ್.ಐ.ಸಿ. ವಿಮೆ, ಕೊರೋನಾ ಸಂಕಷ್ಟ ಕಾಲದಲ್ಲಿ ಆಹಾರ ಕಿಟ್ ಹಾಗೂ ಆರ್ಥಿಕ ನೆರವು, ಕಲಾವಿದರ ಗೃಹ ನಿರ್ಮಾಣಕ್ಕೆ ಉಡುಗೊರೆ, ಆರು ಜನ ಕಲಾವಿದರಿಗೆ ಮನೆ ನಿರ್ಮಿಸಿ ಕೊಟ್ಟಿದೆ. ಯಕ್ಷಗಾನ ಕಲಾವಿದರ ಸಮಾವೇಶ, ಕಲಾವಿದರಿಗೆ ಗುಂಪುವಿಮೆ, ಆರೋಗ್ಯ ತಪಾಸಣೆ, ಕಲಾವಿದ ಡೈರಿ ಬಸ್ ಪಾಸ್, ಕಲಾವಿದರ ಮಕ್ಕಳಿಗೆ ವಿದ್ಯಾರ್ಥಿ ವೇತನ, ತುರ್ತು ಸಂದರ್ಭದಲ್ಲಿ ನೆರವು. ಇಂತಹ ಮಾನವೀಯ ಕೆಲಸಗಳನ್ನು ಮಾಡುತ್ತಾ ಬಂದಿದೆ. 2008ರಲ್ಲಿ ಉಡುಪಿ ಶಾಸಕರಾಗಿರುವ ಶ್ರೀ ಕೆ. ರಘುಪತಿ ಭಟ್‌ರವರ ಆಸಕ್ತಿ ಹಾಗೂ ಪ್ರೋತ್ಸಾಹದೊಂದಿಗೆ ಯಕ್ಷಶಿಕ್ಷಣ ಟ್ರಸ್ಟ್ ನ್ನು ಪ್ರಾರಂಭಿಸಿ ಉಡುಪಿ ವಿಧಾನಸಭಾ ವ್ಯಾಪ್ತಿಯ ೪೮ ಪ್ರೌಢಶಾಲೆಗಳಲ್ಲಿ ಯಕ್ಷಗಾನ ತರಬೇತಿಯನ್ನು ನೀಡುತ್ತಿದೆ ಅಲ್ಲದೆ ತರಬೇತಿ ಪಡೆದ ಮಕ್ಕಳ ಯಕ್ಷಗಾನ ಪ್ರದರ್ಶನವನ್ನೂ ಆಯೋಜಿಸುತ್ತಾ ಬಂದಿದೆ.

## ನೆನಪು – ಸುಮಧುರ ಕಂಠದ ಸುಬ್ರಹ್ಮಣ್ಯ ಧಾರೇಶ್ವರ

ಸುಬ್ರಹ್ಮಣ್ಯ ಧಾರೇಶ್ವರರು ಬಡಗಿನ ರಂಗಸ್ಥಳದಲ್ಲಿ ತನ್ನ ಸುಮಧುರ ಧ್ವನಿ ಹಾಗೂ ಪ್ರಯೋಗಶೀಲತೆಯ ವೈಶಿಷ್ಟ್ಯತೆಯಿಂದ ಯಕ್ಷಾಭಿಮಾನಿಗಳನ್ನು ನಲ್ವತ್ತು ವರ್ಷಗಳ ಕಾಲ ಸುದೀರ್ಘವಾಗಿ ರಂಜಿಸಿ ಈಗ ಬದುಕಿನ ವ್ಯವಹಾರಕ್ಕೆ ವಿದಾಯ ಹೇಳಿದ್ದಾರೆ. ಅವರ ನೆನಪಿನಲ್ಲಿ ಈ ನುಡಿನಮನ. ಪೆರ್ಡೂರು ಮೇಳ ಪ್ರಾರಂಭದಿಂದ ನಿರಂತರ ಇಪ್ಪತ್ತಾರು ವರ್ಷ ತನ್ನ ಅದ್ಭುತ ಶಾರೀರ ಮತ್ತು ಶರೀರದಿಂದ ಯಕ್ಷಗಾನ ಮತ್ತು ಹಿಂದುಸ್ಥಾನಿ ಸಂಗೀತಗಳ ಸಮನ್ವಯ ಭಾಗವತರೆಂದು ಖ್ಯಾತಿ ಪಡೆದು ಯಕ್ಷಗಾನಾಸಕ್ತರ ಹೃದಯದಲ್ಲಿ ಶಾಶ್ವತವಾಗಿ ನೆಲೆ ನಿಂತವರು ಇವರು. ಇನ್ನೂ ಕೆಲವರ್ಷಗಳ ಕಾಲ ರಂಗದಲ್ಲಿ ದುಡಿಯಬಲ್ಲ ಶಾರೀರವಿತ್ತು ಅವರಲ್ಲಿ. ಆದರೆ ಅದಾಗಲೇ ಕಾಲನ ಕರೆಗೆ ಓಗೊಟ್ಟಿದ್ದಾರೆ ಧಾರೇಶ್ವರರು.

ಪೆರ್ಡೂರು ಮೇಳದ ಪ್ರಾರಂಭದ ದಿನಗಳು ಧಾರೇಶ್ವರ, ದುರ್ಗಪ್ಪ ಗುಡಿಗಾರ್, ಗಜಾನನ ದೇವಾಡಿಗರ ಗಜಗಟ್ಟಿ ಹಿಮ್ಮೇಳದಲ್ಲಿ ನಗರ ಜಗನ್ನಾಥ ಶೆಟ್ಟರ ಸುಂದರ, ರಾವಣನಿಗೆ "ಮಾರನಾಸ್ತ್ರ ತಾಗಿ ಬಿಗುವೇರಿತಲ್ಲೊ ಜಾಣೆ" ಪದ್ಯವಿರಬಹುದು, ರಾಮಾಂಜನೇಯದಲ್ಲಿ ಕುಮಟಾ ಗೋವಿಂದ ನಾಯಕರ ಹನುಮಂತನಿಗೆ "ರಘೋತ್ತುಮ ರಾಮ" ಪ್ರವೇಶದ ಪದ್ಯವಿರಬಹುದು, ಮುರೂರು ವಿಷ್ಣು ಭಟ್ಟರ ಸೀತೆಗೆ ವ್ಯಂಗ್ಯಭರಿತವಾದ "ಏನಿದೇನು ಸಿಟ್ಟು ಮಹನೀಯ", ಗೋಡೆಯವರ ಬ್ರಹ್ಮನಿಗೆ "ಮದುವೆ ಬೇಡವೇನೆ?" ಪದ್ಯ ಇರಬಹುದು, ಕುಶಲವದಲ್ಲಿ ಮೋಹನದಾಸ ಶೆಣೈಯವರ ರಾಮನಿಗೆ "ಚೆಲುವರನು ನೋಡಿದರೆ" ಭಾವಪೂರ್ಣವಾದ ಪದ್ಯವಿರಲಿ, ಆ ಕಾಲದ ಯುವಕಲಾವಿದರಾದ ಗೋಪಾಲಾಚಾರ್ಯರ ಅಭಿಮನ್ಯು, ರಾಮ ನಾಯರಿಯವರ ಸುಭದ್ರೆಗೆ "ಯಾತಕಿಂತು ಬುದ್ದಿ ಬಂತು' ಕರುಣಾರಸದ ಪದ್ಯವಿರಲಿ, ಇಲ್ಲೆಲ್ಲ ತನ್ನ ಗುರು ನಾರಣಪ್ಪ ಉಪ್ಪೂರರನ್ನು ನೆನಪಿಸಿದರೆ, ಬಡಗಿನ ಇನ್ನೊಂದು ಶೈಲಿಯಾದ ಕುಂಜಾಲು ಶೈಲಿಯನ್ನು ಆ ಶೈಲಿಯ ಪ್ರಾತಿನಿಧಿಕರಾದ ಮರಿಯಪ್ಪ ಆಚಾರ್ಯರ ಶೈಲಿಯಲ್ಲಿ ಹಾಡಿ ಕಾಳಿಂಗ ನಾವಡರ ನಂತರ ಬಡಗಿನ ಕುಂಜಾಲು ಮತ್ತು ಮಾರ್ವಿ ಎರಡೂ ಶೈಲಿಯ ಪ್ರಾತಿನಿಧಿಕ ತಾನೆಂಬುದನ್ನು ತೋರಿಸಿಕೊಟ್ಟ ಏಕಮೇವ ಭಾಗವತರಿವರು. ಐರೋಡಿ ಗೋವಿಂದಪ್ಪನವರ ಸಭೆಯ ಅರ್ಜುನನಿಗೆ "ಹಂಸಕೇತನಾದಿಗಳೆಲ್ಲ ಕೇಳಿ" ಇರಬಹುದು, ಭೀಷ್ಮ ಪರ್ವದ "ಎಲವೊ ಬಾಲ ಬಾಲ ಭಾಷೆ" ಹಿಂದುಸ್ಥಾನಿ ರೂಪಕತಾಳದ ಪದ್ಯವಿರಲಿ ನಗರದವರ ಅರ್ಜುನನಿಗೆ "ಯಾದವೋತ್ತಮ ಲಾಲಿಸಿ ಕೇಳು" ಪದ್ಯವಿರಲಿ, ಇಲ್ಲೆಲ್ಲ ಕುಂಜಾಲು ಸಮರ್ಥ ಭಾಗವತ ತಾನೆಂದು ತೋರಿಸಿಕೊಟ್ಟ ಕೀರ್ತಿ ಇವರಿಗೆ ಸಲ್ಲುತ್ತದೆ. ಬಡಗುತಿಟ್ಟಿನ ಹಾಸ್ಯಗಾರ ಹಳ್ಳಾಡಿ ಜಯರಾಮ ಶೆಟ್ಟಿ, ಬಡಾಬಡಗುತಿಟ್ಟಿನ ರಮೇಶ ಭಂಡಾರಿಯವರನ್ನು ಸಮರ್ಥವಾಗಿ ರಂಗದಲ್ಲಿ ಬಳಸಿಕೊಂಡ ಕೀರ್ತಿಯೂ ಇವರಿಗೆ ಸಲ್ಲುತ್ತದೆ.

ಹಳೆಯ ಪೌರಾಣಿಕ ಪ್ರಸಂಗಗಳಲ್ಲಿ ಯಕ್ಷಗಾನದಲ್ಲಿ ಪ್ರಚಲಿತವಿದ್ದ ಉಪ್ಪೂರ ಶೈಲಿಯನ್ನು ಹಾಗೂ ಕುಂಜಾಲು ಶೈಲಿಯನ್ನು ಬಳಸಿಕೊಳ್ಳುತಿದ್ದ ಅಪರೂಪದ ಭಾಗವತರಲ್ಲಿ ಇವರೊಬ್ಬರು. ಕುಂಜಾಲು ಶೈಲಿಯಲ್ಲಿ ಹಾಡಬಲ್ಲವರು ಉಪ್ಪೂರರ ಶೈಲಿಯಲ್ಲಿ ಸೋಲುತ್ತಾರೆ. ಉಪ್ಪೂರರ ಶೈಲಿಯಲ್ಲಿ ಹಾಡಬಲ್ಲವರು ಕುಂಜಾಲು ಶೈಲಿಯಲ್ಲಿ ಸೋಲುತ್ತಾರೆ. ಎರಡೂ ಶೈಲಿಯಲ್ಲಿ ತನ್ನ ಕಂಠವನ್ನು ಬಳಸುತಿದ್ದ ಕಾಳಿಂಗ ನಾವಡರ ನಂತರದ ಭಾಗವತರಿವರು ಎಂದರೆ ತಪ್ಪಾಗದು. ಕರ್ಣಾರ್ಜುನ, ಜಾಂಬವತಿ, ಮೀನಾಕ್ಷಿ, ರತಿ ಕಲ್ಯಾಣ ಕೃಷ್ಣಾರ್ಜುನ ಮುಂತಾದ ಪ್ರಸಂಗದಲ್ಲಿ ಕುಂಜಾಲು ಶೈಲಿಯನ್ನು ಬಳಸಿದರೆ, ರಾಮಾಂಜನೇಯ, ಲಂಕಾದಹನ ಪಟ್ಟಾಭಿಷೇಕ ಮುಂತಾದ ಪ್ರಸಂಗಗಳಲ್ಲಿ ಚಾಲ್ತಿಯಲ್ಲಿರುವ ಉಪ್ಪೂರ ಶೈಲಿಯನ್ನು ಬಳಸಿ ಎರಡೂ ಶೈಲಿಗೆ ಮರ್ಯಾದೆ ನೀಡಿದ ಮಹಾನುಭಾವ ಭಾಗವತರಿವರು. ಸಂಪ್ರದಾಯದ ರಾಗಗಳಾದ ಕಾಂಭೋಜಿ, ಹರಿ ಕಾಂಬೋಜಿ, ಅಠಾಣ, ಮಧ್ಯಮಾವತಿ, ಕಲ್ಯಾಣಿ, ಮೋಹನ, ಬಿಲಹರಿ, ದೇವಗಾಂಧಾರಿ, ಆರಭಿ, ಕಾನಡ ತೋಡಿ, ಪೂರ್ವಿ, ಹಿಂದೋಳ ರಾಗದಷ್ಟೆ ಇವರು ಬಳಸುತಿದ್ದ ಹೊಸ ರಾಗಗಳಾದ ವಾಸಂತಿ, ವೃಂದಾವನ ಸಾರಂಗ, ಸಾರಂಗ, ಪೀಲು, ಸಾರಮತಿ, ಉದಯಚಂದ್ರಿಕ, ದೇಶ್, ಮಾಂಡ್, ಆಹೇರಿ, ರೇವತಿ, ಮಾಲ್ ಕಂಸ್, ಬೇಹಾಗ್ ಚಾರುಕೇಶಿಯಂತಹ ಇತ್ತೀಚಿಗೆ ಬಳಕೆಯಾದ ರಾಗಗಳು ಕೂಡ ಅಷ್ಟೇ ಪರಿಪೂರ್ಣ. ಭಾಮಿನಿ ಪದ್ಯಗಳನ್ನು ಯಕ್ಷಗಾನದ ಹೊರತಾದ ಮಟ್ಟಿನಲ್ಲಿ ಹಾಡಬಲ್ಲ ಇವರು ಉತ್ತರ ಕನ್ನಡದ ಕಲಾವಿದರಾದ ಚಿಟ್ಟಾಣಿ ರಾಮಚಂದ್ರ ಹೆಗಡೆ, ಗೋಡೆ ನಾರಾಯಣ ಹೆಗಡೆ, ಭಾಸ್ಕರ ಜೋಶಿ, ವಿಷ್ಣು ಭಟ್ ಮುಂತಾದ ಕಲಾವಿದರೊಂದಿಗೆ, ಹಾಗು ಶುದ್ದ ನಡುತಿಟ್ಟಿನ ನಗರ ಜಗನ್ನಾಥ ಶೆಟ್ಟಿ, ಐರೋಡಿ ಗೋಂವಿಂದಪ್ಪ, ಕೋಟ ವೈಕುಂಠ, ಎಮ್ ಎ ನಾಯ್ಕ, ರಾಮ ನಾಯರಿ, ಮೋಹನದಾಸ ಶೆಣೈ, ಉಪ್ಪುಂದ ನಾಗೇಂದ್ರ, ಗೋಪಾಲಾಚಾರ್ಯ ಮುಂತಾದ ಕಲಾವಿದರನ್ನು ಅವರ ಲಯ, ಸಾಮರ್ಥ್ಯ, ಕಂಠ ಶಕ್ತಿಗನುಗುಣವಾಗಿ ರಂಗದಲ್ಲಿ ಅವರನ್ನು ತೋರ್ಪಡಿಸಿದ್ದಾರೆ. ಹಿರಿಯ ಮದ್ದಳೆ ವಾದಕರಾದ ದುರ್ಗಪ್ಪ ಗುಡಿಗಾರ್, ಬೇಳಂಜೆ ತಿಮ್ಮಪ್ಪ ನ್ಯಾಕ್ ಗಜಾನನ ದೇವಾಡಿಗರಂತೆ ಕಿರಿಯರಾದ ಸುನಿಲ್ ಭಂಡಾರಿ, ಶ್ರೀಧರ ಭಂಡಾರಿ, ರಾಕೇಶ ಮಲ್ಯರನ್ನು ಅಷ್ಟೇ ಸಲೀಸಾಗಿ

ಹೊಂದಿಸಿಕೊಂಡಿದ್ದು ಇವರ ಹೆಚ್ಚುಗಾರಿಕೆ. ಯಕ್ಷಗಾನದಲ್ಲಿ ಹಿಂದೂಸ್ಥಾನಿ ಸಂಗೀತವನ್ನು ಜೋಡಿಸಿ ಕ್ರಾಂತಿ ಮೂಡಿಸಿದ ಇವರು ಯಕ್ಷಗಾನ ಮತ್ತು ಸಂಗೀತದಲ್ಲಿ ಸಮಾನ ಆಸಕ್ತಿಯನ್ನು ಹೊಂದಿದ ಸಂಗೀತಾಸಕ್ತರನ್ನು ಯಕ್ಷಗಾನಕ್ಕೆ ಮಾರುಹೋಗುವಂತೆ ಮಾಡಿದ ಭಾಗವತರಲ್ಲಿ ಮೇರುಪಂಕ್ತಿಯಲ್ಲಿರುವವರು. "ಯಾವ ಕ್ಷೇತ್ರದಲ್ಲಿ ದ್ವೇಷ ನೆಲೆಯೂರಿದರು ಸಂಗೀತಕ್ಕೆ ದ್ವೇಷಿಗಳೆ ಇಲ್ಲ" ಅನ್ನುವ ರೂಢಿ ಮಾತಿನಂತೆ ಸಂಗೀತಾಸಕ್ತರಾಗಿ ಅದೇ ಕ್ಷೇತ್ರಕ್ಕೆ ಇವರು ತಮ್ಮನ್ನು ತೊಡಗಿಸಿಕೊಂಡರು. ರಂಗಸ್ಥಳದ ಎಲ್ಲಾ ತುದಿಯಲ್ಲೂ ಶರೀರ ಹಾಗೂ ಶಾರೀರದ ಕೃಪೆಯಿಂದ ವ್ಯವಸ್ಥಿತ ರಂಗ ವ್ಯವಹಾರವನ್ನು ಕರಗತ ಮಾಡಿಕೊಂಡರು ಸೊಗಸಾದ ಹಾಡುಗಾರಿಕೆ, ವ್ಯವಸಾಯ ಕ್ಷೇತ್ರದಲ್ಲಿ ಗೌರವ, ಜನಪ್ರಿಯತೆ, ವಿಶಿಷ್ಟ ರಂಗತಂತ್ರ, ವಿದ್ಯಾವಂತರನ್ನು ನಾಚಿಸುವ ಭಾಷಣ ಕಲೆ, ಮಾತುಗಾರಿಕೆ, ವಿಶಾಲವಾದ ಕಲಾಕ್ಷೇತ್ರದ ಜನರೊಂದಿಗೆ ಬಾಂಧವ್ಯ, ಸಾಮರಸ್ಯ, ಸಕಲ ಕ್ಷೇತ್ರಗಳಲ್ಲೂ ನೆಲೆಯೂರಿರುವ ಜಾತಿ ರಾಜಕೀಯದಿಂದ ಬಹುದೂರ, ಮೇಳದ ಪ್ರಧಾನ ಭಾಗವತನಿಗಿರಬೇಕಾದ ಈ ಎಲ್ಲಾ ಗುಣಗಳನ್ನು ಹೊಂದಿದ ಅದ್ಭುತ ಭಾಗವತನೆಂದು ಇವರನ್ನು ಎಲ್ಲಾ ಅಂಗಗಳಿಂದಲೂ ಗುರುತಿಸಬಹುದು.




ಚಿಕ್ಕ ಪ್ರಾಯದಲ್ಲೇ ತಮ್ಮ ವೈವಿಧ್ಯಪೂರ್ಣ ಹಾಗೂ ವೈಶಿಷ್ಟ್ಯಪೂರ್ಣ ಪ್ರತಿಭೆಗೆ ಕಿರೀಟವೆಂಬಂತೆ ಧಾರೇಶ್ವರರು ಆರಿಸಿಕೊಂಡ ಕ್ಷೇತ್ರ ಸುಗಮ ಸಂಗೀತ. ಆ ಕಾಲದಲ್ಲಿ 100ಕ್ಕೂ ಮಿಕ್ಕಿ ಸಾರ್ವಜನಿಕ ಕಾರ್ಯಕ್ರಮ ನೀಡಿದ್ದರು. ಭಕ್ತಿಗೀತೆಯ ಧ್ವನಿಸುರುಳಿಗಳಲ್ಲಿ ಅವರ ಧ್ವನಿ ಅಚ್ಚಾಗಿತ್ತು. ಮದ್ರಾಸಿನ ಪ್ರಸಿದ್ಧ ಸಂಗೀತಗಾರ ಟಿ.ವಿ.ಜಿ. ಹಾಗೂ ಮೃದಂಗವಾದಕ ವಾಸುದೇವನ್ ರವರ ನಿರ್ದೇಶನದಲ್ಲಿ ನಿರ್ಮಿತವಾದ ಧ್ವನಿಸುರುಳಿಯಲ್ಲಿ ಧಾರೇಶ್ವರತನವಿರುವುದು ಗಮನಿಸಬಹುದು. ತಾನು ಹತ್ತನೇ ತರಗತಿ ಮುಗಿಸುವ ಹೊತ್ತಿಗೆ ಸಂಗೀತ, ನಾಟಕದ ಗೀಳು ಹೆಚ್ಚಾಗಿ ಸಂಗೀತಗಾರನಾಗುವ ಕನಸು ಹೊತ್ತು ಸಿದ್ದಲಿಂಗೇಶ್ವರ ನಾಟ್ಯ ಸಂಘ ಸಂತನೂರು ಇಲ್ಲಿ ಸಂಗೀತ ನಿರ್ದೇಶಕ ಮತ್ತು ಹಿನ್ನಲೆ ಗಾಯಕನಾಗಿ ಭಡ್ತಿ ಪಡೆದು ಎರಡು ವರ್ಷ ಅನುಭವ ಪಡೆದರು. 1975ರಲ್ಲಿ ಧಾರೇಶ್ವರರ ಜೀವನದಲ್ಲಿ ಒಂದು ಹೊಸ ತಿರುವು ಮೂಡಿತು. ಬಡಗುತಿಟ್ಟಿನ ಅನರ್ಘ್ಯ ರತ್ನಗಳಂತಹ ಭಾಗವತರನ್ನು ನೀಡಿದ ಹಂಗಾರಕಟ್ಟೆ ಯಕ್ಷಗಾನ ಕೇಂದ್ರದ ಪರಿಚಯವಾಯಿತು. ಭಾಗವತ ಕಾಳಿಂಗ ನಾವಡ, ಶಂಕರ ಭಾಗವತ, ಕೆ.ಪಿ.ಹೆಗಡೆ, ಸುರೇಶ ಶೆಟ್ಟಿ, ಹಿರಿಯಣ್ಣಾಚಾರ್, ಶಬರಾಯ ರಾಘವೇಂದ್ರ ಮಯ್ಯ, ಉಮೇಶ ಸುವರ್ಣ ಮುಂತಾದ ಹಿಮ್ಮೇಳದ ಕಲಾವಿದರನ್ನು ನೀಡಿದ ಕೇಂದ್ರದಲ್ಲಿ ನಾರಣಪ್ಪ ಉಪ್ಪೂರ ಮತ್ತು ಮದ್ದಳೆಯ ತಿಮ್ಮಪ್ಪ ನಾಯಕರ ಶಿಷ್ಯತ್ವ ಲಭಿಸಿ ಉಪ್ಪೂರರ ಸ್ಪರ್ಶ ಇವರ ಕಂಠಕ್ಕಾಯಿತು. ಆರ್ಥಿಕ ಭದ್ರತೆಯ ದೃಷ್ಟಿಯಿಂದ ಶ್ರೀ ಅಮೃತೇಶ್ವರಿ ಮೇಳದಲ್ಲಿ ವಿದ್ಯುತ್ ಸಂಯೋಜಕರಾಗಿ ಸೇರಿಕೊಂಡರು. ರಂಗದ ಬಲಭಾಗದಲ್ಲಿ ಲೈಟ್ಂಗ್ ಮಾಡುವಾಗ ಉಪ್ಪೂರರ ಕಂಠ ದುರ್ಗಪ್ಪ ಗುಡಿಗಾರರ ಮದ್ದಳೆಯ ನಿನಾದ ಇವರ ಹುಚ್ಚೆಬ್ಬಿಸಿತು. ಇವರ ಆಸಕ್ತಿ ಗಮನಿಸಿದ ಗುರುಗಳು ಸಂಗೀತಗಾರರನ್ನಾಗಿ ಇವರನ್ನು ಮೇಳಕ್ಕೆ ಭಡ್ತಿ ನೀಡಿದರು. ಇವರ ಕಂಠಸಿರಿಗೆ ಭವ್ಯ ಭಂಗಲೆ ನಿರ್ಮಿಸಿದ ಶಿಲ್ಪಿಗಳ ಸಾಲಿನಲ್ಲಿ ಶ್ರೀ ನಾರಣಪ್ಪ ಉಪ್ಪೂರ, ಹಾಗು ದುರ್ಗಪ್ಪ ಗುಡಿಗಾರರಿಗೆ ಅತ್ಯುನ್ನತ ಸ್ಥಾನ ಲಭಿಸುತ್ತದೆ. ಅಮೃತೇಶ್ವರೀ ಮೇಳದಲ್ಲಿ ಚಿಟ್ಟಾಣಿ ರಾಮಚಂದ್ರ ಹೆಗಡೆ, ನಗರ ಜಗನ್ನಾಥ ಶೆಟ್ಟಿ, ಗೋಡೆ ನಾರಾಯಣ ಹೆಗಡೆ, ಶಿರಿಮತ ಪಂಜು ನಾಯಕ್, ವಾಸುದೇವ ಸಾಮಗ, ಕೋಟ ವೈಕುಂಠ, ಎಂ.ಎ. ನಾಯಕ್, ಹೊನ್ನಪ್ಪ ಗೋಕರ್ಣ ಮುಂತಾದವರ ಒಡನಾಟದಲ್ಲಿ ಪರಿಪೂರ್ಣ ಭಾಗವತರಾಗಿ ಮೂಡಿ ಬಂದರು. ಬಳಿಕ ಪಂಚಲಿಂಗೇಶ್ವರ ಮೇಳದಲ್ಲಿ ಸೇವೆ ಸಲ್ಲಿಸಿದರು.

ಸುಮಾರು 38 ವರ್ಷದ ಹಿಂದೆ ಯಡಾಡಿ ಕರುಣಾಕರ ಶೆಟ್ಟರು ಹೊಸದಾಗಿ ಪೆರ್ಡೂರು ಡೇರೆಮೇಳ ನಿರ್ಮಿಸಿದಾಗ ಸ್ವತಃ ಕಲಾವಿದರಾದ ಕರುಣಾಕರ ಶೆಟ್ಟರು ಧಾರೇಶ್ವರರ ಸಾರಥ್ಯವೇ ಸಮರ್ಥವೆಂದು ತನ್ನ ಅನಂತ ಪದ್ಮನಾಭ ದಶಾವತಾರ ಯಕ್ಷಗಾನ ಮೇಳದಲ್ಲಿ ಪ್ರಧಾನ ಭಾಗವತರ ಪಟ್ಟ ನೀಡಿದರು. ದುರ್ಗಪ್ಪ ಗುಡಿಗಾರರ ಮದ್ದಳೆ, ಗಜಾನನ ದೇವಾಡಿಗರ ಚೆಂಡೆಯ ಹಿಮ್ಮೇಳದಲ್ಲಿ ನಗರ ಜಗನ್ನಾಥ ಶೆಟ್ಟಿ, ಗೋಡೆ ನಾರಾಯಣ ಹೆಗಡೆ, ಉಪ್ಪುಂದ ನಾಗೇಂದ್ರ, ರಾಮ ನಾಯರಿ, ಬೇಳಂಜೆ ಸುಂದರ ನಾಯಕ್, ಕಿನ್ನಿಗೋಳಿ ಮುಖ್ಯಪ್ರಾಣ, ರಮೇಶ ಭಂಡಾರಿ, ತೀರ್ಥಳ್ಳಿ ಗೋಪಾಲಾಚಾರ್ ಮುಂತಾದ ಕಲಾವಿದರೊಂದಿಗೆ ಗಜಗಟ್ಟಿ ಮೇಳವಾಗಿ ತಿರುಗಾಟಕ್ಕೆ ಹೊರಟ ಪೆರ್ಡೂರು ಮೇಳದಲ್ಲಿ ಕಂದಾವರ ರಘುರಾಮ ಶೆಟ್ಟರ ಶೂದ್ರ ತಪಸ್ವಿನಿ ಪ್ರಸಂಗ ಜಯಭೇರಿ ಬಾರಿಸಿ ಮೊದಲ ವರ್ಷದಲ್ಲೇ ದಾಖಲೆ ನಿರ್ಮಿಸಿತು. ಅಂದಿನ ಧಾರೇಶ್ವರರ ಕೊರವಂಜಿಯ ಕಣಿಯ ಹಾಡು, ಧಾರೇಶ್ವರರಿಗೆ ವಿಶೇಷ ಹೆಸರು ತಂದುಕೊಟ್ಟಿತು. ಮುಂದೆ ಚಾರು ಚಂದ್ರಿಕೆ, ಪದ್ಮಪಲ್ಲವಿ, ಮಾನಸ ಮಂದಾರ ಮುಂತಾದ ಹೊಸ ಪ್ರಸಂಗದ ಹಾಡುಗಳು ಇವರಿಗೆ ಅಪಾರ ಜನಮನ್ನಣೆ ನೀಡಿತು. ಧಾರೇಶ್ವರರ ನಿರ್ದೇಶನದಲ್ಲಿ ಗೋಪಾಲಾಚಾರ್ಯ ಮತ್ತು ರಾಮ ನಾಯರಿಯವರ ದೀಪ ನೃತ್ಯ, ಪದ್ಮಪಲ್ಲವಿ ಪ್ರಸಂಗದ ವಿಶೇಷ ಆಕರ್ಷಣೆಯಾಗಿತ್ತು. ಧಾರೇಶ್ವರರು ಭಾಗವತರಾಗುತಿದ್ದಂತೆ ಜನಪ್ರಿಯತೆಯ ತುದಿಗೆ ತಲುಪಲು ಅವರು ಹಾಡಿದ ಕಣಿ ಹಾಡು ಮತ್ತು ಚಾರುಚಂದ್ರಿಕೆಯ 'ಅಲ್ಲಿ ನಾನು ಇಲ್ಲಿ ನೀನು' ಮುಂತಾದ ಹೊಸ ಶೈಲಿಯ ಹಾಡುಗಳು ಸಹ ಪ್ರಮುಖ ಕಾರಣ. ಕಣಿ ಹಾಡಿನಲ್ಲಿ ಜಾನಪದ ಸೊಗಡನ್ನು ಅಳವಡಿಸಿದರೆ "ಅಲ್ಲಿ ನಾನು ಇಲ್ಲಿ ನೀನು" ಎಂಬಲ್ಲಿ ಮಿಶ್ರ ಸಾರಂಗದ ಜಾಡನ್ನು ಪ್ರಯೋಗ ಮಾಡಿದರು. "ಸ್ವಪ್ನ ಸಾಮ್ರಾಜ್ಯ" ಪ್ರಸಂಗದಲ್ಲಿ ಅವರು ಇನ್ನೊಂದು ಪ್ರಯೋಗಕ್ಕೆ ಕೈಹಾಕಿ ಸೈ ಎನಿಸಿಕೊಂಡರು. ಇಲ್ಲಿ ಶಾಸ್ತ್ರೀಯ ರಾಗಗಳನ್ನು ರಂಗಸ್ಥಳಕ್ಕೆ ತಂದರು. ಸೌಗಂಧಿಕಾ ಪುಷ್ಪ ಎಂಬ ರಾಗಮಾಲಿಕೆಯೊಂದನ್ನು ರೂಪಿಸಿಕೂಂಡರು. ಇದು ನಿರಂತರ ಅರ್ಧ ಗಂಟೆಗೂ ಮಿಕ್ಕಿದ ಹಾಡುಗಾರಿಕೆ: ರಾಗಮಾಲಿಕೆ. ಇದರಲ್ಲಿ ಮಧ್ಯಮಾವತಿ, ಕಾನಡ, ಅಠಾಣ, ಹಿಂದುಸ್ಥಾನಿ, ಕೇದಾರ, ಹಿಂದೋಳ ರಾಗಗಳನ್ನು ಕ್ರಮವಾಗಿ ಪ್ರಯೋಗಿಸಿದರು. ಇದಕ್ಕೆ ಪ್ರೇಕ್ಷಕರು ಮಂತ್ರ ಮುಗ್ಧರಾದರು. ಆದರೆ ಗಮನಿಸಬೇಕಾದ ಅಂಶವೆಂದರೆ, ಕಣಿಯ ಹೇಳುವ ಕೇವಲ ಜಾನಪದ ಹಾಡಾಗಿ, ಅಲ್ಲಿ ನೀನು ಇಲ್ಲಿ ನಾನು ಭಾವ ಗೀತೆಯಾಗಿ, ನಾಗವಲ್ಲಿ ಪ್ರಸಂಗದ "ಕಣಕಣದಲೂ ಶಾರದೆ" ಹಾಡಿನಲ್ಲಿ ಭಕ್ತಿ ರಸದ ಪರಾಕಾಷ್ಠೆಯಾಗಿ, ರಾಗಮಾಲಿಕೆ ಸಂಗೀತ ಕಛೇರಿಯ ಭಾಗವಾಗಿ ರಂಗಸ್ಥಳ ಪ್ರವೇಶಿಸಲಿಲ್ಲ. ಅವೆಲ್ಲವೂ ಯಕ್ಷಗಾನದ ಸಾಧ್ಯತೆಯ ಚೌಕಟ್ಟಿನೊಳಗೆ ಯಕ್ಷಗಾನ ಹಾಡುಗಳಾಗಿಯೇ ಪ್ರವೇಶಿಸಿದವು. ಯಕ್ಷಗಾನದ್ದೇ ತಾಳ, ಹಿಮ್ಮೇಳಗಳನ್ನು ಬಳಸಿದ್ದು ಅವರ ಹೆಚ್ಚುಗಾರಿಕೆ. ಸೃಜನಶೀಲ ಕಲಾವಿದರಾಗಿ ಧಾರೇಶ್ವರರು ಪರಂಪರೆಯ ಪ್ರಸಂಗಗಳಿಗೆ ಸನ್ನಿವೇಶಗಳಲ್ಲಿ ಮಾರ್ಪಾಡು ಮಾಡಿದ್ದಾರೆ. "ಭೀಷ್ಮ ವಿಜಯ"ದಲ್ಲಿ ಸೋತ ಅಂಬೆ ಪುನಹ ಸಾಲ್ವನ ಬಳಿಗೆ ಹೋದಾಗ ಆತನ ಅವಹೇಳನ ತಮಾಷೆ ಹುಸಿ ಮುನಿಸು ಎಂದು ಧಾರೇಶ್ವರರ ಕಲ್ಪನೆಯ ಅಂಬೆ ತಿಳಿದು ತುಜಾವಂತು ರಾಗದ ಬದಲು ಶೃಂಗಾರದ ಉದಯ ಚಂದ್ರಿಕ ರಾಗದ "ಕೇಳಯ್ಯ ಖಳರಾಯ ಪೂರ್ವದಲಿ ನಾನು"

ಪದ್ಯ ಕಾಂಭೋಜಿಗೆ ಬದಲಾಗಿ ಕಲಾವತಿಯಲ್ಲಿ "ಕರುಣನಿಧಿ ಅವದರಿಸು" ಶಂಕರಾಭರಣ ರಾಗದ "ಭಾವಕಿಯ ಸೌಂದರ್ಯ ನೋಡಿ" ಯನ್ನು ಮೋಹನದಲ್ಲಿ ಬೆಳಗಿನ ಜಾವದಲ್ಲಿ ಅವರು ಅಳವಡಿಸಿದರೆ ಪ್ರೇಕ್ಷಕರು ಹುಚ್ಚೆದ್ದು ಕುಣಿಯುವ ದೃಶ್ಯ ಅವರ ಸೃಜನಶೀಲತೆಗೆ ಸಾಕ್ಷಿ, ಕೇವಲ ಕಚ ದೇವಯಾನಿಯ ಸಂಭಾಷಣೆಯ "ಪೋಗಿ ಬಹೆ ನಾ ನಾಗವೇಣಿಯೇ" ಪರಮ ಸಖನೆ ಕೇಳೋ, ದೇಶ್ ರಾಗದಲ್ಲಿ ಬಬ್ರುವಾಹನದ 'ಶೃಂಗರಿಸಿ ಉರಗೇಂದ್ರ ನಂದನೆ', ಪದ್ಯಗಳೆ ಸಾಕು ಅವರ ಪೌರಾಣಿಕ ಪ್ರಸಂಗದ ನೆಲೆಗಟ್ಟನ್ನು ಅರಿಯಲು. "ಬೊಬ್ಬೆ ಹೊಡೆಯುವುದು ಭಾಗವತಿಕೆ ಅಲ್ಲ" ಅನ್ನುವ ಹಿರಿಯ ಕಲಾವಿದ ದಿ ಕೆರೆಮನೆ ಮಹಾಬಲ ಹೆಗಡೆಯವರ ಮಾತನ್ನು ಸಾರ ಸಗಟಾಗಿ ಪಾಲಿಸಿಕೊಂಡು ಬಂದ ಸಜ್ಜನ ಕಲಾವಿದರಾಗಿ ವಿದ್ವಜ್ಜನರ ಮನ್ನಣೆಗೆ ಪಾತ್ರರಾದರು. ಧಾರೇಶ್ವರರ ವಿಶೇಷತೆಯೇ ಅವರ ಕೋಮಲ ಕಂಠ, ಶಬ್ದಗಳ ಸ್ಪಷ್ಟ ಉಚ್ಚಾರ, ರಾಗಗಳ ಬಳಕೆಯಲ್ಲಿನ ಜಾಣ್ಮೆ, ಶೃಂಗಾರ, ಕರುಣ, ಭಕ್ತಿ ರಸದ ಪದ್ಯಗಳಲ್ಲಿ ಅವರದ್ದು ಎತ್ತಿದ ಕೈ. ಕಾರ್ತವೀರ್ಯನ ಜಲಕ್ರೀಡೆ, ಸಾಲ್ವನ ಶೃಂಗಾರ, ಸುಧನ್ವ– ಪ್ರಭಾವತಿ, ಭೀಷ್ಮ–ಪರಶುರಾಮ, ಶರ್ಮಿಷ್ಠೆ–ದೇವಯಾನಿ. ಗದಾಯುದ್ಧದ ನಿನ್ನಯ ಬಲುಹೇನು, ಕಪಟನಾಟಕ ರಂಗ, ಅಠಾಣ ರಾಗದ ಶ್ರೀ ಮನೋಹರ ಸ್ವಾಮಿ ಪರಾಕು, ಮುಂತಾದ ಅವರ ಕಂಠದಿಂದ ಮೂಡಿಬಂದ ಪದ್ಯಗಳು ಭಾಗವತಿಕೆಯ ಆಸಕ್ತರು ಅನುದಿನವೂ ನೆನಪಿಸುವ ಪದ್ಯಗಳಾಗಿ ದಾಖಲಾಗಿದೆ.

ಧಾರೇಶ್ವರರ ಹಾಡುಗಾರಿಕೆಯನ್ನು ಗಿಮಿಕ್ಸ್ ಎಂದೂ, ಭಾವಗೀತೆ ಎಂದೂ ವಿಮರ್ಶಿಸಿದ ಒಂದು ವರ್ಗವಿದೆ. ಅದನ್ನೆ ಗಿಮಿಕ್ಸ್ ಅನ್ನುವ ಬದಲು ಪ್ರಯೋಗಶೀಲತೆ ಎನ್ನಬಹುದಲ್ಲ. ಇಳಿ ಶ್ರುತಿಯಲ್ಲಿ ಮಾತ್ರ ಹಾಡಬಲ್ಲರು ಅನ್ನುವ ಕೆಲವರಿಗೆ ಪೌರಾಣಿಕ ಪ್ರಸಂಗದಲ್ಲಿ ಕಪ್ಪು ಮೂರರಲ್ಲೂ ಬಿಳಿ ನಾಲ್ಕರಲ್ಲೂ ಹಾಡಿ ತೋರಿಸಿ ಹುಬ್ಬೇರಿಸುವಂತೆ ಮಾಡಿದ್ದಾರೆ. ಸುಗಮ ಸಂಗೀತ, ಶಾಸ್ತ್ರೀಯ ಸಂಗೀತವನ್ನು ಯಕ್ಷಗಾನಕ್ಕೆ ಅವರು ಪೋಣಿಸಿದ್ದು ಈ ಕಲೆಗಿರುವ ಮೈಲಿಗೆಯನ್ನು ತೊಡೆದು ಹಾಕಿದೆ. ಇದರಿಂದ ಭಾಗವತಿಕೆಯ ಕ್ಷೇತ್ರ ಅಪಾರ ವಿಸ್ತಾರ ಪಡೆಯಿತು. ಎಡದಲ್ಲಿ ನಾವಡರನ್ನೂ ಬಲಭಾಗದಲ್ಲಿ ಧಾರೇಶ್ವರರನ್ನು ಕುಳ್ಳಿರಿಸಿ ನಾರಣಪ್ಪ ಉಪ್ಪೂರರು ಮಾಡಿದ ಸಾಧನೆ ಸಾರ್ಥಕವಾಯಿತು. ಯಾವುದೆ ಕಲಾವಿದ ಹೊಸತನವನ್ನು ಅರ್ಥಪೂರ್ಣವಾಗಿ ತಂದಾಗ ಕಲೆ ಪರಿಪೂರ್ಣವಾಗುತ್ತದೆ. ಯಾವುದೇ ಕಲೆ ನಿಂತ ನೀರಾಗಬಾರದು ಸದಾ ಹರಿಯುತ್ತಿರಬೇಕು ಆದರೆ ದಡಮೀರಿ ಹರಿಯದಂತಹ ಎಚ್ಚರ ಬೇಕು. ಅಂತಹ ಎಚ್ಚರದಿಂದ ಪರಿಪೂರ್ಣ ಬಡಗುತಿಟ್ಟಿನ ಭಾಗವತರಾಗಿ ಮೂಡಿ ಬಂದವರು ಗುಂಡ್ಮಿ ಕಾಳಿಂಗ ನಾವಡರು ಮತ್ತು ಸುಬ್ರಹ್ಮಣ್ಯ ಧಾರೇಶ್ವರರು. ಇವರೀರ್ವರು ಈ ಶತಮಾನದ ಉತ್ತರಾರ್ಧದ ಯುಗಪುರುಷ ಭಾಗವತರೆಂದಲ್ಲಿ ತಪ್ಪಾಗದು.



ಸುಸಂಸ್ಕೃತ ವಿದ್ಯಾವಂತ ಕುಟುಂಬ ಹೊಂದಿದ ಅವರದ್ದು ಪತ್ನಿ ಒಬ್ಬ ಪುತ್ರ ಕಾರ್ತಿಕ, ಪುತ್ರಿ ತೇಜಸ್ವಿನಿಗೆ ಒಳ್ಳೆಯ ವಿದ್ಯೆ ನೀಡಿ ಕಲಾವಿದರಿಗೆ ಆದರ್ಶಪ್ರಾಯರಾಗಿದ್ದಾರೆ. ತಂದೆಗೆ ಚಂಡೆಯ ಸಾಥಿ ನೀಡಿದ ಗಜಾನನ ದೇವಾಡಿಗರ ಚೆಂಡೆಯ ನಿನಾದಕ್ಕೆ ಮಾರು ಹೋಗಿ ತಂದೆಯ ವಿರೋಧದ ನಡುವೆಯು ಉತ್ತಮ ಚೆಂಡೆ ವಾದಕನಾಗಿದ್ದು ಪುತ್ರ ಕಾರ್ತಿಕನ ದೊಡ್ಡ ಸಾಧನೆ ಎನ್ನಬಹುದು. ನನಗೂ ಕಾರ್ತಿಕನ ಚೆಂಡೆವಾದನಕ್ಕೆ ಪದ್ಯ ಹೇಳುವ ಅವಕಾಶ ಲಭಿಸಿತ್ತು. ಧಾರೇಶ್ವರರು ಅಗಲಿರುವ ಈ ಶೋಕಕಾಲದಲ್ಲಿ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇನೆ.

***ಲೇಖಕರು – ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ ಮಣಿಪಾಲ***

## ಬಡಗುತಿಟ್ಟು ಯಕ್ಷಗಾನ ಭಾಗವತಿಕೆಯ ವಿವಿಧ ಶೈಲಿ–ಮಟ್ಟುಗಳ ಪ್ರಾತ್ಯಕ್ಷಿಕೆಯ ದಾಖಲಾತಿ

ಉಡುಪಿ ಯಕ್ಷಗಾನ ಕೇಂದ್ರ ಹಾಗೂ ಉಡುಪಿ ಪ್ರಾದೇಶಿಕ ರಂಗ ಕಲೆಗಳ ಅಧ್ಯಯನ ಕೇಂದ್ರ (ಆರ್.ಆರ್.ಸಿ.) ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಜಂಟಿ ಸಹಯೋಗದಲ್ಲಿ ದಿನಾಂಕ ೦೭–೦೪–೨೦೨೪ರಂದು ಉಡುಪಿ ಎಂ.ಜಿ.ಎಂ. ಕಾಲೇಜಿನ ಆವರಣದಲ್ಲಿರುವ ರವೀಂದ್ರ ಮಂಟಪದಲ್ಲಿ ಬಡಗುತಿಟ್ಟು ಯಕ್ಷಗಾನ ಭಾಗವತಿಕೆಯ ವಿವಿಧ ಶೈಲಿ–ಮಟ್ಟುಗಳ ಪ್ರಾತ್ಯಕ್ಷಿಕೆಯ ದಾಖಲಾತಿ ಮತ್ತು ಪ್ರದರ್ಶನ ನಡೆಯಿತು. ಪ್ರಾತ್ಯಕ್ಷಿಕೆಯಲ್ಲಿ ರಾಮಾಯಣದ ಪ್ರಸಂಗಗಳಾದ ಪ್ರಾದುಕಾ ಪ್ರದಾನ, ಪಟ್ಟಾಭಿಷೇಕ, ಪಂಚವಟಿ, ವಾಲಿವಧೆ ಹಾಗೂ ಲಂಕಾದಹನದ ಆಯ್ದ ಸುಮಾರು ೬೦ ಪದ್ಯಗಳನ್ನು ಅಳವಡಿಸಲಾಗಿದೆ. ಬಡಗಿನ ಹಿರಿಯ ಖ್ಯಾತ ಭಾಗವತರಾದ ಶ್ರೀ ಹೆರಂಜಾಲು ಗೋಪಾಲ ಗಾಣಿಗರ ನೇತೃತ್ವದಲ್ಲಿ ಭಾಗವತರುಗಳಾದ ವಿಷ್ಣು ಸುಬ್ರಾಯ ಹೆಗ್ಡೆ, ಕಿಗ್ಗ ಹಿರಿಯಣ್ಣ ಆಚಾರ್ಯ, ಉದಯ ಕುಮಾರ್ ಹೊಸಾಳ, ನಾಗೇಶ್ ಕುಲಾಲ್ ಹಾಗೂ ಕೃಷ್ಣ ದಾಸ್ ಮರವಂತೆ ಹೀಗೆ ಆರು ಮಂದಿ ಭಾಗವತರು



ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಿದ್ದರು. ಮದ್ದಳೆಯಲ್ಲಿ ಮಹೇಶ್ ಮಂದಾರ್ತಿ ಹಾಗೂ ರಾಘವೇಂದ್ರ ಹೆಗ್ಡೆ ಯಲ್ಲಾಪುರ ಮತ್ತು ಚಂಡೆಯಲ್ಲಿ ಶ್ರೀಕಾಂತ ಶೆಟ್ಟಿ ಎಡಮೊಗೆ ಸಹಕರಿಸಿದ್ದರು. ಸ್ವತಃ ಭಾಗವತರಾದ ಪ್ರೊ. ಎಸ್. ವಿ. ಉದಯ ಕುಮಾರ್ ಶೆಟ್ಟಿ ಎಂ.ಐ.ಟಿ. ಮಣಿಪಾಲ ಇವರು ರಾಗ ತಾಳ ಸಹಿತ ವಿಸ್ತೃತ ನಿರೂಪಣೆ ನೀಡಿದರು.

ಮೊದಲಿಗೆ, ವಾಡಿಕೆಯಂತೆ ಗಣಪತಿ ಸ್ತುತಿಯನ್ನು ಸೌರಾಷ್ಟ ತ್ರಿವುಡೆಯಲ್ಲಿ ಗೋಪಾಲ ಗಾಣಿಗರು ಆರಂಭಿಸಿ, ಮುಂದುವರಿಕೆಯಲ್ಲಿ ಉಳಿದ ಭಾಗವತರುಗಳು ಪಾಲ್ಗೊಂಡರು. ಬಳಿಕ ಪ್ರಸಂಗದ ಪದಗಳನ್ನು ಅವುಗಳ ರಾಗ, ತಾಳ, ಮಟ್ಟನ್ನು ಖಚಿತ ಪಡಿಸುವಂತೆ ಹಾಡಿ ಪ್ರಸ್ತುತ ಪಡಿಸಿದರು. "ದಶರಥ ಭೂಪಗೆ–ಕೌಸಲ್ಯಾ ದೇವಿಯು" ಎಂಬ ಪೂರ್ವಿಮಟ್ಟು ಅಂಕಿತವಿರುವ ಪದವನ್ನು ಉದಯ ಕುಮಾ ಹೊಸಾಳರವರು ಧವಳಾ ರಾಗದಲ್ಲಿ ಪ್ರಸ್ತುತ ಪಡಿಸಿದರು. ವಿಷ್ಣು ಸುಬ್ರಾಯ ಹೆಗ್ಡೆಯವರು ಪೋಗುವೆ ದಮ್ಮಯ್ಯ ಎಂಬ ಪದವನ್ನು ರಾಗನೀಲಾಂಬರಿ ತಾಳ ಝುಂಪೆಯಲ್ಲಿ ಹಾಡಿದರು. ಕಾಮಿನಿ ನಿನ್ನನ್ನು ಕಂಡು ಕಾಮನು ದಂಡೆತ್ತಿ ಬಂದು"ಎಂಬ ಪದ್ಯವನ್ನು ಆರಂಭದಲ್ಲಿ ಗೋಪಾಲ ಗಾಣಿಗರು ಆರಂಭಿಸಿ, ಅವರೊಡನೆ ಉದಯ ಕುಮಾರ್ ಸೇರಿಕೊಂಡರು. ಮುಂದೆ "ಮಾರೀಚ ನಿಶಾಚರ….."ಎಂಬ ಕಾಪಿ ಏಕತಾಳದ ಪದ್ಯವನ್ನು ನಾಗೇಶ್ ಕುಲಾಲ್ ಹಾಡಿ ತೋರಿಸಿದರು. ಚಿತ್ತವಿಸಯ್ಯ ರಾಮ"ಎಂಬ ಪಂಚವಟಿ ಪ್ರಸಂಗದ ಯರಕಲ ಕಾಂಬೋಧಿ ರಾಗದ ಪದವನ್ನು ಕೃಷ್ಣದಾಸ್ ಮರವಂತೆಯವರು ಆದಿ ಮತ್ತು ಏಕತಾಳದಲ್ಲಿ ಹಾಡಿದರು. ಹಾಗೆ "ಧೂರ್ತ ರಕ್ಕಸಿ ಕೇಳು ತಾಟಕಿ" ಎಂಬ ಪಂಚಾಗತಿ ಮಟ್ಟು ವೀರರಸದ ಪದ್ಯವನ್ನು ಕಿಗ್ಗ ಹಿರಿಯಣ್ಣ ಆಚಾರ್ಯರು ಏರು ಶ್ರುತಿಯಲ್ಲಿ ಪ್ರಸ್ತುತ ಪಡಿಸಿದರು. ಈ ತರದ ವೀರರಸದ ಪಂಚಾಗತಿ ಮಟ್ಟು ಪದಗಳನ್ನು ಮೇಳದ ಆಟಗಳಲ್ಲಿ ಅದರ ಸ್ಥಾಯಿಭಾವಕ್ಕೆ ವಿರೋಧವಾಗಿ ಅನುಚಿತ ವಿಸ್ತರಣೆ ಮಾಡಿ ಚಾಲುಕುಣಿತಕ್ಕೆ ಅನುಕೂಲವಾಗುವಂತೆ ಹಾಡುತ್ತಿರುವುದು ಈ ಪ್ರಾತ್ಯಕ್ಷಿಕೆಯಿಂದ ಅನುಭವಕ್ಕೆ ಬರುತ್ತದೆ. ಮುಂದುವರಿದು, ರಂಜನೆಗಾಗಿ ಹೊಸ ಸಾರಾಮತಿ ರಾಗದಲ್ಲಿ ಚಾಲುಕುಣಿತ ಸಹಿತ ಶೃಂಗಾರದ ಶೂರ್ಪನಖಿಯ ಪಂಚವಟಿ ಪ್ರಸಂಗದ "ನೆರೆಮನಸ್ಸನ್ನೊಳಿಟ್ಟು….." ಪದವನ್ನು ಗೋಪಾಲ ಗಾಣಿಗರು ಹಾಗೂ ಉದಯ ಕುಮಾರರವರು ಹಾಡಿ ಮಟ್ಟು ಸಾಧ್ಯತೆಯನ್ನು ಸಾದರಪಡಿಸಿದರು. ಅನಂತರ ಯಕ್ಷಗಾನದಲ್ಲಿ ತೀವ್ರ ಭಾವಾಭಿವ್ಯಕ್ತಿ ಪ್ರಕಟಿಸಲು ಸಹಕಾರಿಯಾದ ವಿತಾಳದ ಪದಗಳನ್ನು ಮತ್ತು ದ್ವಿಪದಿಗಳನ್ನು ಪ್ರಸ್ತುತಪಡಿಸಿ ಮಂಗಳ ಹಾಡಿನೊಂದಿಗೆ ದಾಖಲಾತಿ ಕಾರ್ಯ ನೆರವೇರಿತು.

ಈ ಅಪೂರ್ವ ಕಾರ್ಯಕ್ರಮದ ರೂವಾರಿಗಳಾದ ಉಡುಪಿ ಪ್ರಾದೇಶಿಕ ರಂಗ ಕಲೆಗಳ ಅಧ್ಯಯನ ಕೇಂದ್ರದ ಆಡಳಿತಾಧಿಕಾರಿಗಳಾದ ಡಾ। ಬಿ. ಜಗದೀಶ್ ಶೆಟ್ಟಿ ಹಾಗೂ ಯಕ್ಷಗಾನ ಕೇಂದ್ರದ ಸಲಹಾ ಸಮಿತಿಯ ಅಧ್ಯಕ್ಷರಾದ ಪಳ್ಳಿ ಕಿಶನ್ ಹೆಗ್ಡೆ ಹಾಗೂ ಮಾಹೆಯ ಆಡಳಿತ ವರ್ಗ ಉಪಸ್ಥಿತರಿದ್ದರು. ಕಾರ್ಯಕ್ರಮದ ನಿರ್ವಹಣೆಯನ್ನು ಉಪನ್ಯಾಸಕ ರಾಘವೇಂದ್ರ ತುಂಗ ನಡೆಸಿಕೊಟ್ಟರು.

***ಲೇಖಕರು – ಬೇಳೂರು ರಾಘವ ಶೆಟ್ಟಿ,*** 'ಕೃಷ್ಣದೇವ" ಚಿತ್ರಪಾಡಿ, ಅಂಚೆ ಸಾಲಿಗ್ರಾಮ, ಉಡುಪಿ ತಾಲೂಕು

# ಪ್ರಬುದ್ಧ ಮಹಿಳಾ ಅರ್ಥಧಾರಿ ಶ್ರೀಮತಿ ಪದ್ಮಾ ಕೆ. ಆರ್ ಆಚಾರ್ಯ





ಪ್ರತಿಯೋರ್ವರ ಜೀವನ ಅವರು ಹುಟ್ಟಿ, ಬೆಳೆದ ಪರಿಸರದಿಂದ ಪ್ರಭಾವಿತವಾಗಿರುತ್ತದೆ ಎಂಬ ಮಾತು ಅಕ್ಷರಶಃ ಸತ್ಯ. ನಮ್ಮ ಸುತ್ತಮುತ್ತ ನಡೆಯುವ ವಿಚಾರಗಳು ಎಳೆಯ ಮಕ್ಕಳ ಮನಸ್ಸಿನ ಮೇಲೆ ಪ್ರಭಾವ ಬೀರುವಷ್ಟು ಬೇರಾವ ವಿಚಾರಗಳು ಮಕ್ಕಳ ಮನಸ್ಸಿಗೆ ಅಷ್ಟೊಂದು ಆಪ್ತವೆನಿಸುವುದಿಲ್ಲ. ಅಂತೆಯೇ ಎಳವೆಯಲ್ಲಿ ಹುಟ್ಟಿಕೊಂಡ ಅರ್ಥಗಾರಿಕೆಯ ಆಸಕ್ತಿ ಪದ್ಮಾ ಆಚಾರ್ಯ ಅವರನ್ನು ತಾಳಮದ್ದಳೆಯ ತಂಡ ಕಟ್ಟುವಷ್ಟರವರೆಗೆ ತಂದು ನಿಲ್ಲಿಸಿದೆ.

ಯಕ್ಷಗಾನದ ತವರೂರಾದ ಕಾಸರಗೋಡಿನ ಕುಂಬಳೆ ಸಮೀಪದ ಎಡನೀರು ಇವರ ಹುಟ್ಟೂರು. ಶ್ರೀ ರಾಮಕೃಷ್ಣ ರಾವ್ ಮತ್ತು ಶ್ರೀಮತಿ ಸತ್ಯವತೀ ರಾವ್ ದಂಪತಿಗಳ ದ್ವಿತೀಯ ಪುತ್ರಿಯಾಗಿ ಪದ್ಮಾ ಆಚಾರ್ಯ ಅವರು ಬಿ.ಎ. ಹಾಗೂ ಎಲ್.ಎಲ್.ಬಿ ವರೆಗಿನ ವಿದ್ಯಾಭ್ಯಾಸವನ್ನು ಪಡಕೊಂಡವರು. ಎಳವೆಯಲ್ಲಿಯೇ ಕಲಾಸಕ್ತರಾದ ಇವರು ಶಾಲಾದಿನಗಳಲ್ಲಿ ನಡೆಯುತ್ತಿದ್ದ ನೃತ್ಯ, ನಾಟಕ, ಸಂಗೀತ ಮೊದಲಾದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಾ ಇದ್ದರು. ಮುಂದಕ್ಕೆ ಅವರ ಆಸಕ್ತಿ ಸಾಹಿತ್ಯ ಕ್ಷೇತ್ರದತ್ತ ಹರಿಯಿತು. ಲೇಖನ, ಕವನಗಳನ್ನು ಬರೆಯವುದಕ್ಕೆ ಆರಂಭಿಸಿದ ಇವರು ಭಾಷಣ, ಧಾರ್ಮಿಕ ಪ್ರವಚನಗಳಲ್ಲಿಯೂ ತನ್ನನ್ನು ತಾನು ತೊಡಗಿಸಿಕೊಂಡರು. ಕಾನೂನು ಅಭ್ಯಾಸವನ್ನು ಮಾಡಿದ ಇವರು ಒಂದು ವರ್ಷ ಕಾಸರಗೋಡಿನ ನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. 1991 ರಲ್ಲಿ ಪುತ್ತೂರಿನ ಪ್ರಖ್ಯಾತ ನ್ಯಾಯವಾದಿಗಳಾದ ಶ್ರೀ ಕೆ.ಆರ್. ಆಚಾರ್ಯ ಅವರನ್ನು ವರಿಸಿದ ಬಳಿಕವೂ ಇವರ ಸಾಹಿತ್ಯಾಸಕ್ತಿ ನಿಂತ ನೀರಾಗಲಿಲ್ಲ. ಅದರ ಜೊತೆಗೆ ಯಕ್ಷಗಾನ ಅರ್ಥಗಾರಿಕೆಯತ್ತ ಚಿತ್ತವನ್ನು ಹರಿಸುತ್ತಾರೆ. ಯಕ್ಷಗಾನದ ಆಡುಂಬೊಲವಾದ ಎಡನೀರಿನಲ್ಲಿ ಬಾಲ್ಯವನ್ನು ಕಳೆದ ಇವರು, ಶ್ರೀ ಎಡನೀರು ಮಠದಲ್ಲಿ ನಡೆಯುತ್ತಿದ್ದ ತಾಳಮದ್ದಳೆಗಳಲ್ಲಿ ಶೇಣಿ ಗೋಪಾಲಕೃಷ್ಣ ಭಟ್, ರಾಮದಾಸ ಸಾಮಗ, ಪೆರ್ಲ ಕೃಷ್ಣ ಭಟ್, ದೇರಾಜೆ ಸೀತಾರಾಮಯ್ಯ ಮುಂತಾದವರ ಅರ್ಥವನ್ನು ಕೇಳುತ್ತಿದ್ದ ಇವರಿಗೆ ಕ್ರಮೇಣ ಯಕ್ಷಗಾನ ಅರ್ಥಗಾರಿಕೆಯಲ್ಲಿ ಆಸಕ್ತಿ ಬೆಳೆಯಿತು.

೨೦೦೫ ರಲ್ಲಿ ದಿ. ಅನಂತಕೃಷ್ಣ ಬರೆಪ್ಪಾಡಿಯವರ ಮಾರ್ಗದರ್ಶನದಲ್ಲಿ ಖರಾಸುರ ವಧೆಯ ಶ್ರೀರಾಮನಾಗಿ ಮೊದಲ ಬಾರಿಗೆ ಅರ್ಥವನ್ನು ಹೇಳಿದ ಮೇಲೆ ಮತ್ತೆಂದೂ ಹೆಜ್ಜೆಯನ್ನು ಹಿಂದಿಟ್ಟವರಲ್ಲ. ಮುಂದಕ್ಕೆ ಆಂಜನೇಯ ಯಕ್ಷಗಾನ ಸಂಘದ ಭಾಸ್ಕರ ಬಾರ್ಯರ ಮಾರ್ಗದರ್ಶನದಲ್ಲಿ ಕೃಷ್ಣ ಸಂಧಾನದ ಕೃಷ್ಣ, ಸುಧನ್ವಾರ್ಜುನದ ಸುಧನ್ವ, ಶರಸೇತುವಿನ ಅರ್ಜುನ, ಕರ್ಣಾವಸಾನದ ಕರ್ಣನೇ ಮೊದಲಾದ ಪಾತ್ರಗಳನ್ನು ನಿರ್ವಹಿಸಿದರು. ಮಹಿಳಾ ಕಲಾವಿದೆಯರನ್ನು ತಾಳಮದ್ದಳೆ ಕ್ಷೇತ್ರದಲ್ಲಿ ಬೆಳೆಸುವ ತುಡಿತವಿದ್ದ ಇವರು 2013 ರಲ್ಲಿ ಸಮಾನ ಮನಸ್ಕರೊಂದಿಗೆ ಸೇರಿಕೊಂಡು ಧೀಶಕ್ತಿ ಮಹಿಳಾ ಯಕ್ಷಬಳಗವೆಂಬ ತಂಡವನ್ನು ಕಟ್ಟಿ, ಆರಂಭದಲ್ಲಿ ಹರೀಶ್

ಬಳಂತಿಮೊಗರು ಮಾರ್ಗದರ್ಶನದಲ್ಲಿ ಪ್ರಸಂಗ ತಯಾರಿ ನಡೆಸಿ, ಪ್ರದರ್ಶನ ನೀಡುತ್ತಿದ್ದರು. ಕ್ರಮೇಣ ಸ್ವತಃ ಪದ್ಮಾ ಆಚಾರ್ಯ ಅವರೇ ಪ್ರಸಂಗಗಳನ್ನು ಆಯ್ದು ನಿರ್ದೇಶನ ಮಾಡುವುದಕ್ಕಾರಂಭಿಸಿದರು. ೨೦೨೦ ರಲ್ಲಿ ಬಾಲಿಕೆಯರಿಗಾಗಿ ಧೀಶಕ್ತಿ ಬಾಲಿಕಾ ಬಳಗವನ್ನು ಸ್ಥಾಪಿಸಿ, ವಿದ್ಯಾರ್ಥಿನಿಯರನ್ನು ತಾಳಮದ್ದಳೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದರು. ಧೀಶಕ್ತಿ ಮಹಿಳಾ ಯಕ್ಷಬಳಗ ಆರಂಭವಾದ ಸಮಯದಲ್ಲಿ ಕೇವಲ ಐದು ಸದಸ್ಯೆಯರಿದ್ದು, ಈಗ ಮೂವತ್ತಕ್ಕೂ ಹೆಚ್ಚು ಸದಸ್ಯೆಯರಿದ್ದಾರೆ. ಕರ್ನಾಟಕ, ಕೇರಳದ ಭಾಗಗಳಲ್ಲಿ ಮಾತ್ರವಲ್ಲದೇ ಮುಂಬೈಯಲ್ಲೂ ಕಲಾಪ್ರಕಾಶ ಪ್ರತಿಷ್ಠಾನದವರ ಸಹಕಾರದಲ್ಲಿ ಎರಡು ವರ್ಷಗಳ ಕಾಲ ವಾರಪೂರ್ತಿ ತಾಳಮದ್ದಳೆಯನ್ನು ನಡೆಸಿದ ಹಿರಿಮೆ ಇವರದು. ಶ್ರೀಕೃಷ್ಣ ರಾಯಭಾರ, ಸುಧನ್ವ ಮೋಕ್ಷ, ಸಂಜಯ ರಾಯಭಾರ, ಸುದರ್ಶನ ವಿಜಯ, ಸುಭದ್ರಾ ಕಲ್ಯಾಣ, ಜಾಂಬವತೀ ಕಲ್ಯಾಣ, ಪಟ್ಟಾಭಿಷೇಕ, ಕರ್ಣಾವಸಾನ, ಶ್ರೀರಾಮ ನಿರ್ಯಾಣ, ದಕ್ಷಯಜ್ಞ, ವೀರಮಣಿ ಕಾಳಗ, ಇಂದ್ರಜಿತು ಕಾಳಗ, ಉತ್ತರನ ಪೌರುಷ, ಶ್ರೀರಂಗ ತುಲಾಭಾರ, ಭೀಷ್ಮ ಪರ್ವ, ಭೀಷ್ಮ ವಿಜಯವೇ ಮೊದಲಾದ ಪ್ರಸಂಗಗಳ ತಾಳಮದ್ದಳೆಗಳು ಇವರ ನೇತೃತ್ವದಲ್ಲಿ ನಡೆಯುತ್ತಿವೆ. ಪುತ್ತೂರಿನ ಶಶಾಂಕ್ ನೆಲ್ಲಿತ್ತಾಯ ಇವರಲ್ಲಿ ನಾಟ್ಯಾಭ್ಯಾಸ ಮಾಡಿ ಯಕ್ಷಗಾನ ವೇಷವನ್ನೂ ಮಾಡಿದ್ದಾರೆ. ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ಮಹಿಳಾ ಯಕ್ಷಗಾನ ತಂಡದ ಸದಸ್ಯೆಯಾಗಿದ್ದರು. ಹಿರಣ್ಯ, ರಂಗ ಭಟ್, ಪನೆಯಾಲ, ತಲಪಾಡಿ, ಕಲ್ಚಾರ್, ಬಳಂತಿಮುಗರು, ಗಾಳಿಮನೆ ಮೊದಲಾದ ಅನುಭವೀ ಅರ್ಥಧಾರಿಗಳೊಡನೆ ಅರ್ಥ ಹೇಳುವ ಸದವಕಾಶವೂ ಇವರಿಗೆ ದೊರೆತಿದೆ. ಯಕ್ಷಗಾನ ತಾಳಮದ್ದಳೆ ಮಾತ್ರವಲ್ಲದೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲೂ ಭಕ್ತಿಗೀತೆ, ಭಾವಗೀತೆ, ಜಾನಪದ ಗೀತೆ, ರುಬಾಯಿ, ಗಝುಲ್, ಚುಟುಕು ಮೊದಲಾದ ಸಾಹಿತ್ಯ ಪ್ರಕಾರವನ್ನು ರಚಿಸಿದ್ದಾರೆ. ಎರಡು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ(ಅಪ್ರಕಟಿತ). "ಪದುಮನಾಬನ ಪದಪಲ್ಲವ" ಎಂಬ ಮುಕ್ತಕ ಸಂಕಲನ ಪ್ರಕಟಗೊಂಡಿದೆ. ಇವಿಷ್ಟೇ ಅಲ್ಲದೇ ಪುತ್ತೂರಿನಲ್ಲಿ ಇನ್ನರ್ ವೀಲ್, ಜೇಸಿರೇಟ್, ಕುಶಲ ಹಾಸ್ಯ ಸಂಘ ಮೊದಲಾದವುಗಳಲ್ಲಿ ಪ್ರಮುಖ ಹುದ್ದೆಗಳನ್ನು ನಿರ್ವಹಿಸಿದವರು. ಪ್ರಸ್ತುತ ವಿವೇಕಾನಂದ ವಿದ್ಯಾವರ್ಧಕ ಸಂಘ ಪ್ರವರ್ತಿತ ರೇಡಿಯೋ ಪಾಂಚಜನ್ಯದ ಸಂಚಾಲಕರಾಗಿ, ಸಂಸ್ಕಾರ ಭಾರತೀ ಪುತ್ತೂರು ಇದರ ವಿಧಾ ಪ್ರಮುಖರಾಗಿ, ಪುತ್ತೂರು ದಸರಾ ನಾಡಹಬ್ಬ ಸಮಿತಿಯ ಸಹಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.



ಇವರ ಸಾಧನೆಯನ್ನು ಅನೇಕ ಸಂಘ–ಸಂಸ್ಥೆಗಳು ಗುರುತಿಸಿ, ಗೌರವಿಸಿವೆ. ದುರ್ಗಾಂಬಾ ಮಹಿಳಾ ಯಕ್ಷಗಾನ ತಂಡ ತಡಂಬೈಲು, ಯಕ್ಷಾರಾಧನಾ ಕಲಾಕೇಂದ್ರ ಮಂಗಳೂರು, ಕಲಾಭಿವರ್ಧನ ಕರಾವಳಿ ಕಲಾಮಿಕೇತನ ಮೈಸೂರು ಮೊದಲಾದ ಸಂಸ್ಥೆಗಳು ತಾಳಮದ್ದಳೆ ಕ್ಷೇತ್ರದ ಸಾಧನೆಯನ್ನು ಗೌರವಿಸಿವೆ. ಸಾಹಿತ್ಯ ಸೇವೆಗಾಗಿ ಅಕ್ಷರೋತ್ಸವ ಸಾಹಿತ್ಯ ಬಳಗದವರು 'ಅಕ್ಷರೋತ್ಸವ ಪ್ರಶಸ್ತಿ' ನೀಡಿ ಗೌರವಿಸಿದ್ದಾರೆ. ಪತಿಗೆ ತಕ್ಕ ಸತಿಯಾಗಿ, ಈರ್ವರು ಪುತ್ರರ ತಾಯಿಯಾಗಿ ಸುಖೀ ಸಂಸಾರವನ್ನು ನಡೆಸುತ್ತಿರುವ ಇವರ ಕಲಾಜೀವನ ಇನ್ನಷ್ಟು ಪ್ರಜ್ವಲಿಸಲಿ ಎಂಬ ಆಶಯವಷ್ಟೇ ನಮ್ಮದು.

***ಲೇಖಕರು*– ಸಾಯಿಸುಮಾ ಎಂ. ನಾವಡ, ಕಾರಿಂಜ**

## ಯಕ್ಷಸಾಹಿತ್ಯ ಪರಿಚಯ–4

**ಯಕ್ಷಗಾನ ಪ್ರಸಂಗ ಕೃತಿಗಳ ಜೊತೆಗೆ ಸುಮಾರು ನೂರು ವರ್ಷಗಳಿಂದ ಹಲವು ಯಕ್ಷಸಾಹಿತ್ಯ ಕೃತಿಗಳು ಪ್ರಕಟವಾಗಿವೆ. ಹಲವು ಹಿರಿಯ ಕಲಾವಿದರ ಅಭಿನಂದನಾ ಗ್ರಂಥ, ಸಂಸ್ಮರಣಾ ಗ್ರಂಥ, ವಿಮರ್ಶೆ, ಸಂಶೋಧನಾ ಕೃತಿ, ಲೇಖನ ಸಂಗ್ರಹ ಇತ್ಯಾದಿ ವಿಭಾಗದಲ್ಲಿ ಸಾವಿರಾರು ಕೃತಿಗಳು ಪ್ರಕಟವಾಗಿವೆ. ಅವುಗಳ ಪರಿಚಯವನ್ನು ಈ ಅಂಕಣದಲ್ಲಿ ಮಾಡಿಕೊಡುತ್ತಿದ್ದೇವೆ. ಈ ಸಂಚಿಕೆಯಲ್ಲಿ ಕೆಲವು ಪ್ರಮುಖ ಹಿರಿಯ ಕಲಾವಿದರ ಅಭಿನಂದನಾ ಮತ್ತು ಸಂಸ್ಮರಣಾ ಕೃತಿಗಳ ವಿವರ ನೀಡುತ್ತಿದ್ದೇವೆ. (ಹಿಂದಿನ ಸಂಚಿಕೆಯಿಂದ ಮುಂದುವರಿದುದು)**

| ಕ್ರಮ ಸಂಖ್ಯೆ | ಕೃತಿಯ ಹೆಸರು | ಪ್ರಕಟಣಾ ವರ್ಷ | ಲೇಖಕರು/ಸಂಪಾದಕರು | ಪ್ರಕಾಶಕರು | ವಿಶೇಷತೆ |
|---|---|---|---|---|---|
| 46 | ಕೃಷ್ಣ ಸ್ಮರಣ | 2009 | ಎನ್ ಪಿ ಶೆಟ್ಟಿ | ದಿವಂಗತ ಕೆರೇಕೈ ಕೃಷ್ಣ ಭಟ್ಟರ ಸಂಸ್ಮರಣ ಸಮಿತಿ ಶಿರಸಿ | ದಿವಂಗತ ಕೆರೇಕೈ ಕೃಷ್ಣ ಭಟ್ಟರ ಸಂಸ್ಮರಣ ಗ್ರಂಥ |
| 47 | ಯಕ್ಷವನವಿಹಾರ | 2009 | ನಿರೂಪಣೆ: ಕಡತೋಕ ಗೋಪಾಲಕೃಷ್ಣ ಭಾಗವತ | ಯಕ್ಷರಂಗ ಹಳದಿಪುರ, ಹೊನ್ನಾವರ | ಕಡತೋಕ ಮಂಜುನಾಥ ಭಾಗವತರ ಆತ್ಮಕಥನ |
| 48 | ಆಟದ ಒಡನಾಟ | 2010 | ಹಂದಾಡಿ ಸುಬ್ಬಣ್ಣ ಭಟ್ | ಶೇವಧಿ ಪ್ರಕಾಶನ, ಉಡುಪಿ | ಹಂದಾಡಿ ಸುಬ್ಬಣ್ಣ ಭಟ್ ಇವರ ಅನುಭವ ಕಥನಗಳು ಸೇರಿದಂತೆ ಯಕ್ಷಗಾನಕ್ಕೆ ಸಂಬಂದಿಸಿದ ಲೇಖನಗಳ ಸಂಕಲನ |
| 49 | ಅಭಿಜಾತ ಕಲಾವಿದ ಚಿಟ್ಟಾಣಿ | 2010 | ಡಾ ಜಿ ಎಸ್ ಭಟ್ ಮೈಸೂರು | ಪ್ರಸಾರಾಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು | ಚಿಟ್ಟಾಣಿ ರಾಮಚಂದ್ರ ಹೆಗಡೆಯವರ ಯಕ್ಷ ಜೀವನ ಚಿತ್ರಣ |
| 50 | ಲಿಂಗಣ್ಣ | 2011 | ಜೆಡ್ಡು ಸದಾಶಿವ ಭಟ್ಟ | ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಎಂ.ಜಿ.ಎಂ ಕಾಲೇಜು, ಉಡುಪಿ | ಹೊಸಹಿತ್ತಿಲು ಮಹಾಲಿಂಗ ಭಟ್ಟರ ಅನುಭವ ಕಥನ |

| ಕ್ರಮ ಸಂಖ್ಯೆ | ಕೃತಿಯ ಹೆಸರು | ಪ್ರಕಟಣಾ ವರ್ಷ | ಲೇಖಕರು/ಸಂಪಾದಕರು | ಪ್ರಕಾಶಕರು | ವಿಶೇಷತೆ |
|---|---|---|---|---|---|
| 51 | ಯಕ್ಷ ಭಂಡಾರಿ | 2011 | ಚಂದ್ರಶೇಖರ ಮಂಡೆಕೋಲು | ಯಕ್ಷಗಾನ ಅಧ್ಯಯನ ಕೇಂದ್ರ ಮಂಗಳೂರು ವಿ ವಿ | ಪುತ್ತೂರು ಶೀನಪ್ಪ ಭಂಡಾರಿಯವರ ಅನುಭವ ಕಥನ |
| 52 | ಸಿರಿ ಸಂಪದ | 2011 | ಉಪೇಂದ್ರ ಸೋಮಯಾಜಿ | ಶ್ರೀನಿವಾಸ ಪುಸ್ತಕ ಪ್ರಕಾಶನ ಬಸವನಗುಡಿ ಬೆಂಗಳೂರು | ಹಂದಟ್ಟು ಶ್ರೀಧರ ಹಂದೆ-೭೫ ಅಭಿನಂದನ ಗ್ರಂಥ |
| 53 | ಡಾ ಶೇಣಿ ಗೋಪಾಲಕೃಷ್ಣ ಭಟ್ | 2011 | ಡಾ ಶ್ರೀಧರ ಭಟ್ | ಪ್ರಸಾರಾಂಗ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮೈಸೂರು | ಡಾ ಶೇಣಿ ಗೋಪಾಲಕೃಷ್ಣ ಭಟ್ ಅವರ ವ್ಯಕ್ತಿ ಚಿತ್ರಣ, ಅವರ ಯಕ್ಷ ಜೀವನದ ಸಮಗ್ರ ಮಾಹಿತಿ |
| 54 | ಹಾರಾಡಿ ರಾಮ ಗಾಣಿಗ | 2011 | ಕಂದಾವರ ರಘುರಾಮ ಶೆಟ್ಟಿ | ಕನ್ನಡ ಸಂಘ, ಕಾಂತಾವರ | ಹಾರಾಡಿ ರಾಮಗಾಣಿಗರ ವ್ಯಕ್ತಿ ಚಿತ್ರಣ |
| 55 | ಯಕ್ಷರತ್ನ ಶ್ರೀ ಜಲವಳ್ಳಿ ವೆಂಕಟೇಶ ರಾವ್ | 2012 | ಎಂ ಡಿ ಹರಿಕಾಂತ, ಮಂಕಿ | ಮೇಘಶ್ರೀ ಪ್ರಕಾಶನ ಮಂಕಿ, ಹೊನ್ನಾವರ | ಜಲವಳ್ಳಿ ವೆಂಕಟೇಶ ರಾವ್ ವ್ಯಕ್ತಿ ಚಿತ್ರಣ |
| 56 | ಅಳಿಕೆ-<br>ಅಳಿಕೆ ರಾಮಯ್ಯ ರೈ ಸ್ಮೃತಿ-ಕೃತಿ | 2012 | ನಿತ್ಯಾನಂದ ಶೆಟ್ಟಿ | ದೆಹಲಿ ಮಿತ್ರ ನವದೆಹಲಿ | ಅಳಿಕೆ ರಾಮಯ್ಯ ರೈ ಸ್ಮೃತಿ-ಕೃತಿ |
| 57 | ಗೋಡೆ ಗಾರುಡಿ | 2012 | | ಗೋಡೆ ನಾರಾಯಣ ಹೆಗಡೆ ಅಭಿನಂದನ ಸಮಿತಿ ಸಿದ್ದಾಪುರ | ಗೋಡೆ ನಾರಾಯಣ ಹೆಗಡೆ ಅಭಿನಂದನ ಗ್ರಂಥ |
| 58 | ನಾದ ಶಂಕರ | | ಎನ್ ಅಶೋಕ ಭಟ್ ಉಜಿರೆ | ಕುರಿಯ ವಿಠಲ ಶಾಸ್ತ್ರಿ ಪ್ರತಿಷ್ಠಾನ ಉಜಿರೆ | ಪದ್ಯಾಣ ಶಂಕರನಾರಾಯಣ ಭಟ್ ಅಭಿನಂದನ ಗ್ರಂಥ |
| 59 | ಯಕ್ಷ ಶತ ರವಿ | 2012 | | ರವಿ ಅಲೆವೂರಾಯರ ಅಭಿನಂದನಾ ಸಮಿತಿ ಕೋಡಿಕಲ್ ಮಂಗಳೂರು | ರವಿ ಅಲೆವೂರಾಯರ ಅಭಿನಂದನ ಗ್ರಂಥ |
| 60 | ಮೂಡಂಬೈಲು ಶಾಸ್ತ್ರಿ-೭೫ | 2012 | ಡಾ ಎಂ ಪ್ರಭಾಕರ ಜೋಶಿ ಹಾಗೂ ಇತರರು | ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ ಮೂಡಂಬಯಲು ಅಡ್ಯನಡ್ಕ | ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ ಅಭಿನಂದನ ಗ್ರಂಥ |

*ಸಂಗ್ರಹ: ಉಮೇಶ್ ಶಿರೂರು ಬೆಂಗಳೂರು*

*ದೂರವಾಣಿ – 9448353910*

**ಗಮನಿಸಿ- ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ-ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ-** 9482847978. **ನಮ್ಮ ವೆಬ್ ಸೈಟ್ ವಿಳಾಸ-** https://nyt.1ngo.in/ **– ಸಂಪಾದಕರು**

**ನಾದ ನೂಪುರ ಡಿಜಿಟಲ್ ಯಕ್ಷ ಪತ್ರಿಕಾ ಬಳಗ**

**ವಂಡಾರು ಗೋವಿಂದ I ಶುಭಾಶಯ I ಪ್ರೊ. ಉದಯ್ ಕುಮಾರ್ ಶೆಟ್ಟಿ I ಎಂ ಶಾಂತಾರಾಮ್ ಕುಡ್ವ I ಸಾಯಿಸುಮ ಎಂ ನಾವಡ I ಉಮೇಶ್ ಶಿರೂರ್**

**ನ್ಯೂಸ್ ಲೆಟರ್ ವಿನ್ಯಾಸ – ಶುಭಾಶಯ**